# ಶ್ರೀ ರಾಮಚಂದ್ರ ಮಿಷನ್
# ಎಖೋಸ್ ಇಂಡಿಯ

ಮಾರ್ಚ್ 2009 ಆಂತರಿಕ ಪ್ರಸಾರಕ್ಕಾಗಿ ಮಾತ್ರ ಸಂಪುಟ 2 ಸಂಚಿಕೆ 2


ಪ್ರಣಾಮಗಳು

ಈ ಸುದ್ದಿ ಪತ್ರಿಕೆಯನ್ನು ಈಗ ಅನೇಕ ಅಭ್ಯಾಸಿಗಳು ಓದುತ್ತಿದ್ದಾರೆಂಬುದು ಮತ್ತು ಇದು ದೇಶದ ದೂರದೂರದ ಮೂಲೆಗಳಿಗೂ ತಲುಪುತ್ತಿದೆಯೆಂಬುದು ನಮಗೆ ಅತೀವ ಸಂತಸ ತಂದಿದೆ. ವಲಯಗಳಿಂದ ಲೇಖನಗಳು ಅಧಿಕವಾಗಿ ಹರಿದು ಬರುತ್ತಿದೆ ಮತ್ತು ಸುದ್ದಿ ಸಂಗ್ರಹ ಮಾಡುವುದು ನಮಗೆ ನಿಜಕ್ಕೂ ಆನಂದದಾಯಕವಾಗಿದೆ.

ಜನವರಿ ಮತ್ತು ಫ಼ೆಬ್ರುವರಿಗಳು ಗುರುಗಳಿಗೆ ಬಿಡುವಿಲ್ಲದ ಮಾಸಗಳಾಗಿದ್ದವು. ಅವರು ದೇಶದಾದ್ಯಂತ ಪ್ರವಾಸ ಮಾಡುತ್ತಲಿದ್ದು, ಈ ಸಂಚಿಕೆಯ ಪರಿಷ್ಕರಣದ ಮುಕ್ತಾಯದ ವೇಳೆಯಲ್ಲಿ ಅವರ ಉತ್ತರ ಭಾರತದ ಪ್ರವಾಸ ಮುಂದುವರೆದಿತ್ತು.

ಪೂಜ್ಯ ಲಾಲಾಜಿ ಮಹಾರಾಜರ ಜನ್ಮದಿನೋತ್ಸವ, ವಲಯ ಮುಖ್ಯಸ್ಥರ ಮತ್ತು ಕೇಂದ್ರ ಮುಖ್ಯಸ್ಥರ ವಿಚಾರ ಸಂಕಿರಣ, ಅನೇಕ ಅಭ್ಯಾಸಿ ತರಬೇತಿ ಕಾರ್ಯಕ್ರಮಗಳು, ಮೌಲ್ಯಾಧಾರಿತ ಆಧ್ಯಾತ್ಮಿಕ ಶಿಕ್ಷಣ ಕಾರ್ಯಕ್ರಮಗಳು ಮತ್ತು ಬೆಂಗಳೂರಿನಲ್ಲಿ ಯುವ ಸಂಕಿರಣ ಇವು ಈ ಸಂಚಿಕೆಯ ಕೆಲ ಲೇಖನಗಳು. 'ಪ್ರಭಾ ಕೇಂದ್ರಗಳು' ವಿಭಾಗದಲ್ಲಿ ಷಹಜಹಾನಪುರ ಆಶ್ರಮ ನಿರೂಪಿತವಾಗಿದೆ. ಏಪ್ರಿಲ್ 30ರಂದು ಬಿಡುಗಡೆಯಾಗುತ್ತಿರುವ 'ದಿವ್ಯಲೋಕದಿಂದ ಪಿಸುಮಾತುಗಳು : ಸಂಪುಟ 2' ಇದು ನಮ್ಮ ಗುರುಗಳು ನಮಗೆ ನೀಡುತ್ತಿರುವ ಉಡುಗೊರೆ.

ಮೇ 2009 ಸಂಚಿಕೆಗೆ ಸುದ್ದಿ ಲೇಖನಗಳು ತಲುಪಲು ಕೊನೆಯ ದಿನಾಂಕ: ಏಪ್ರಿಲ್ 15, 2009. ದಯಮಾಡಿ ಲೇಖನಗಳನ್ನು ಸಂಬಂಧಪಟ್ಟ ಭಾವಚಿತ್ರಗಳೊಡನೆ ನಿಮ್ಮ ವಲಯದ ಮುಖ್ಯಸ್ಥರ ಮೂಲಕ ಕಳುಹಿಸಿಕೊಡಿ.

ಶುಭಾಶಯಗಳೊಡನೆ
ಸಂಪಾದಕ ತಂಡ

## ಗುರುಗಳ ಪ್ರವಾಸ ಜನವರಿ ಮತ್ತು ಫ಼ೆಬ್ರುವರಿ 2009

ಪೊಂಗಲ್ ಹಬ್ಬದ ವೇಳೆ ಗುರುಗಳು ಚೆನ್ನೈನಲ್ಲಿ ಇದ್ದುದರಿಂದ, ಆ ಸಮಯದಲ್ಲಿ ಅನೇಕ ಅಭ್ಯಾಸಿಗಳು ಮಣಪಾಕ್ಕಂ ಆಶ್ರಮಕ್ಕೆ ಭೇಟಿ ನೀಡಿದರು. ಈ ಹಬ್ಬದ ಸಡಗರದಲ್ಲಿ ಗುರುಗಳು ಅನೇಕ ವಿವಾಹಗಳನ್ನು ನಡೆಸಿಕೊಟ್ಟರು. ಜನವರಿ 19 ರಂದು ಅವರು ರಾಮಪುರಂಗೆ ಭೇಟಿಕೊಟ್ಟರು(1991ರಲ್ಲಿ ಅವರು ಇಲ್ಲಿಯ ಆಶ್ರಮವನ್ನು ಉದ್ಘಾಟಿಸಿದ್ದರು). ಸತ್ಸಂಗ ನಡೆಸಿದ ನಂತರ, ಅವರು ಒಂದು ಗಂಟೆ ಪ್ರಯಾಣಮಾಡಿ ಚಿತ್ತೂರು ತಲುಪಿದರು. ಅಲ್ಲಿ ನೆರೆದಿದ್ದ ಸುಮಾರು 1100 ಅಭ್ಯಾಸಿಗಳಿಗೆ ಸತ್ಸಂಗ ನಡೆಸಿದರು. ಸತ್ಸಂಗದ ನಂತರ, ಅವರು ತಮ್ಮ ವಾಸ್ತವ್ಯಕ್ಕಾಗಿ ಸಿದ್ಧವಾಗಿದ್ದ ಕುಟೀರವನ್ನು ಉದ್ಘಾಟಿಸಿದರು. ಒಂದು ಖಾಸಗಿ ಸಂವಾದದಲ್ಲಿ ಸಾವಿನ ಬಗ್ಗೆ ಮಾತನಾಡುತ್ತ, ಒಂದು ರೈಲಿನ ನಿದರ್ಶನ ನೀಡಿ, ಜನರು ಇಳಿಯುತ್ತಾರೆ ಮತ್ತು ಹೊಸ ಪ್ರಯಾಣಿಕರು ಹತ್ತುತ್ತಾರೆ, ಆದರೆ ನಾವು ಯಾರ ಬಗ್ಗೆಯೂ ತಲೆ ಕೆಡಿಸಿಕೊಳ್ಳುವುದಿಲ್ಲವೆಂದರು. ಇದೇ ರೀತಿ, ಪ್ರೀತಿಪಾತ್ರರು ನಿಧನರಾದಾಗ, ಅವರ ಸಾವಿನಿಂದ ಅಭ್ಯಾಸಿಗಳು ಆಂತರಿಕ ಪ್ರಶಾಂತತೆ ಮತ್ತು ಪರಿಶುದ್ಧತೆಗೆ ಭಂಗವುಂಟಾಗದಂತೆ ನೋಡಿಕೊಳ್ಳಬೇಕು.

ಅಲ್ಪ ವಿಶ್ರಾಂತಿಯ ನಂತರ, ಸಂಜೆ ಗುರುಗಳು ಮತ್ತೊಂದು ಸತ್ಸಂಗ ನಡೆಸಿಕೊಟ್ಟರು, ಅಲ್ಲದೆ ಒಂದು ಉಪನ್ಯಾಸ ನೀಡಿ ಜನರು ಪರಿವರ್ತನೆಯನ್ನು ಸ್ವೀಕರಿಸಬೇಕೆಂದು ಮತ್ತು ಅದಕ್ಕಾಗಿ ಧ್ಯಾನ ಮಾಡಬೇಕೆಂದು ಕರೆ ನೀಡಿದರು. ಗುರುಗಳು 20ರ ಬೆಳಿಗ್ಗೆ ಸತ್ಸಂಗವನ್ನು ನಡೆಸಿ ನಂತರ ತಿರುಪತಿಗೆ ತೆರಳಿದರು.

ತಿರುಪತಿ ತಲುಪಿದ ಅವರು ಅಲ್ಲಿ ನೆರೆದಿದ್ದ ಸುಮಾರು 1500 ಜನಕ್ಕೆ ಸತ್ಸಂಗವನ್ನು ನಡೆಸಿ ಒಂದು ಉಪನ್ಯಾಸವನ್ನು ಸಹ ನೀಡಿದರು. ಕುಟೀರದಲ್ಲಿ ತುಂಬ ಸಂತೋಷ ಹಾಗು ವಿನೋದ ಭರಿತರಾಗಿದ್ದ ಅವರು ಎಖೋಸ್ ಇಂಡಿಯಾದ ಜನವರಿ ಸಂಚಿಕೆಯಲ್ಲಿ ಪ್ರಕಟವಾಗಿದ್ದ ಭಾವಚಿತ್ರವನ್ನು ನೋಡಿ ಹಳೆಯ ನೆನಪುಗಳಲ್ಲಿ ಮುಳುಗಿದರು. ಮಧ್ಯಾಹ್ನ ಭೋಜನಾನಂತರ ಚಿತ್ತೂರಿಗೆ ಮರಳಿ ಮರು ಬೆಳಿಗ್ಗೆ ಅಲ್ಲಿಂದ ಚೆನ್ನೈಗೆ ತೆರಳಿದರು.








ಗುರುಗಳು ಅಹಮದಾಬಾದ್ ತಲುಪಿದ್ದು ಜನವರಿ 23ರಂದು. 24ರ ಬೆಳಿಗ್ಗೆ ಗುರುಗಳು ಅಡಲಜ್ ಆಶ್ರಮದ ಧ್ಯಾನ ಮಂದಿರ ಪ್ರವೇಶ ಮಾಡುವಾಗ, ಎಲ್ಲ ಅಭ್ಯಾಸಿಗಳು ಮುಂಚೆಯೇ ಬಂದು ಸಂಪೂರ್ಣ ನಿಶ್ಯಬ್ದರಾಗಿ ಕುಳಿತಿರುವುದು ಕಂಡು ಮೆಚ್ಚಿಕೊಂಡರು. ಸತ್ಸಂಗದ ಹಿಂದೆಯೇ ಅನುಸರಿಸಿ ಬಂದದ್ದು ಸೋದರಿ ರಂಜನಾ ಮೆಹ್ತಾರವರ ಸುಮಧುರ ಭಜನೆಗಳು. ಗುರುಗಳು ಸಂಜೆ ವಿಶ್ರಾಂತಿ ಪಡೆಯುವರೆಂದು ನಮ್ಮ ನಿರೀಕ್ಷೆಯಾಗಿದ್ದರೂ, ತಮ್ಮ ಇಲ್ಲಿನ ವಾಸ್ತವ್ಯದಲ್ಲಿ ತಾವು ಐದು ಬೈಠಕುಗಳನ್ನು ಕೊಡುವೆನೆಂದು ಪ್ರಕಟಿಸಿದಾಗ ನಾವು ಚಕಿತರಾದೆವು. ಇದು ಅಭ್ಯಾಸಿಗಳಿಗೆ ಹಾಗು ಕಾರ್ಯಕರ್ತರಿಗೆ, ಮಿಷನ್ನಿನ ಕೆಲಸಮಾಡುವಾಗ ನಮ್ಮೊಳಗೆ ಒಂದು ಚುರುಕುತನದ ಪ್ರಜ್ಞೆ ಬೆಳೆಸಿಕೊಳ್ಳಬೇಕೆಂಬ ಮತ್ತು ನಮ್ಮ ಬದುಕಿನ ಆಧ್ಯಾತ್ಮಿಕ ಪಾರ್ಶ್ವವನ್ನು ಗುರುತಿಸಿ ಅದಕ್ಕೆ ಆದ್ಯತೆ ನೀಡಬೇಕೆಂಬ ಸ್ಪಷ್ಟ ಸಂದೇಶ ನೀಡಿತು.






26ರಂದು ಸತ್ಸಂಗದ ನಂತರ, ಗುರುಗಳು ಗುಜರಾತಿ ಯುವಜನರು ಅಭಿನಯಿಸಿದ ಗರ್ಬ ಮತ್ತು ರಾಸ (ಸಾಂಪ್ರದಾಯಿಕ ಗುಜರಾತಿ ನೃತ್ಯಗಳು)ವನ್ನು ವೀಕ್ಷಿಸಿದರು. ಅನಂತರ ಗುಜರಾತ್ ಮತ್ತು ನೆರೆ ರಾಜ್ಯಗಳಿಂದ ಬಂದ ಸುಮಾರು 140 ಪ್ರಶಿಕ್ಷಕರ ಸಭೆಯನ್ನು ನಡೆಸಿದರು. ಒಂದು ಬೈಠಕು ನೀಡುವುದರ ಜೊತೆಗೆ ಒಂದು ಉಪನ್ಯಾಸವನ್ನೂ ಅನುಗ್ರಹಿಸಿದರು. ಸಾಕಷ್ಟು ಬಳಲಿದ್ದ ಅವರು ಸ್ವಲ್ಪ ವಿಶ್ರಾಂತಿಯ ನಂತರ ಸಂಜೆಯನ್ನು ನಿರಾತಂಕವಾಗಿ ಕಳೆದರು.

ಗುರುಗಳು 27ರ ಮಧ್ಯಾಹ್ನ ದೆಹಲಿ ತಲುಪಿ, ಜ಼ೋನಲ್ ಆಶ್ರಮಕ್ಕೆ 28ರ ಬೆಳಿಗ್ಗೆ ಭೇಟಿ ನೀಡಿದರು ಮತ್ತು ಸತ್ಸಂಗ ನಡೆಸಿದರು. ಸುತ್ತ ಮುತ್ತಲಿನ ಕೇಂದ್ರಗಳಿಂದ ಬಂದು ಸತ್ಸಂಗದಲ್ಲಿ ಭಾಗಿಗಳಾದ ಅಭ್ಯಾಸಿಗಳ ಸಂಖ್ಯೆ ಸುಮಾರು 2500 ದಾಟಿತ್ತು. ಸತ್ಸಂಗದ ಮಧ್ಯದಲ್ಲಿ ಒಬ್ಬ ಅಭ್ಯಾಸಿಯ ಸೆಲ್ ದೂರವಾಣಿ ರಿಂಗಣಿಸಿತು. ಸತ್ಸಂಗವಾದ ಬಳಿಕ ಗುರುಗಳು ಆ ಅಭ್ಯಾಸಿಗೆ ವೇದಿಕೆಯ ಬಳಿ ಬಂದು ನೆರೆದಿದ್ದ ಅಭ್ಯಾಸಿಗಳ ಕ್ಷಮೆ ಕೋರುವಂತೆ ಹೇಳಿದರು. 29ರ ಬೆಳಿಗ್ಗೆ ಅವರು ಸತ್ಪೋಲಿಗೆ ಪ್ರಯಾಣಿಸಿದರು.



ಅವರು 29ರಂದು ಮೊರಾದಾಬಾದ್ ತಲುಪಿದಾಗ ನೂರಾರು ಅಭ್ಯಾಸಿಗಳು ರಸ್ತೆಯ ಎರಡೂ ಬದಿಯಲ್ಲಿ ಶಿಸ್ತಿನಿಂದ ನಿಂತು ಅವರನ್ನು ಸ್ವಾಗತಿಸಿದರು. ಆ ರಾತ್ರಿ ಗುರುಗಳು ರುದ್ರಾಪುರದಲ್ಲಿ ತಂಗಿದ್ದು, 30ರ ಬೆಳಿಗ್ಗೆ ಉಪಾಹಾರದ ನಂತರ ಸತ್ಪೋಲಿಗೆ ಹೊರಟರು.

ಸತ್ಪ್ಹೋಲಿನಲ್ಲಿ ಗುರುಗಳನ್ನು ಒಂದು ಗೀತೆಯನ್ನು ಹಾಡಿ ಸ್ವಾಗತಿಸಲಾಯಿತು. ಪ್ರಯಾಸಕರ ಪ್ರಯಾಣದ ನಂತರವೂ, ಅವರು ಅಭ್ಯಾಸಿಗಳ ಕುಶಲೋಪರಿ ವಿಚಾರಿಸಿ, ಸ್ವಾರಸ್ಯಕರ ಸಂಭಾಷಣೆಯಲ್ಲಿ ತೊಡಗಿ ಸಮಯ ಕಳೆದರು. ಭಾರತೀಯ ಪಂಚಾಂಗದ ಪ್ರಕಾರ ಜನವರಿ 31ರಂದು ಪೂಜ್ಯ ಲಾಲಾಜಿ ಮಹಾರಾಜರ ಜನ್ಮದಿನ. ಪವಿತ್ರ ಬಸಂತಗಳಲ್ಲೆಲ್ಲ ಇದು ಅತ್ಯಂತ ಪವಿತ್ರವಾದುದು ಎಂದು ಗುರುಗಳು ನುಡಿದರು. ಅಭ್ಯಾಸಿಯೊಬ್ಬರು ಅವರಿಗೆ ಗುಡ್ಡಗಾಡಿನ ಸಾಂಪ್ರದಾಯಿಕ ಟೋಪಿಯನ್ನು ಕೊಡುಗೆಯಾಗಿ ನೀಡಿದಾಗ, ಅವರು ಅದನ್ನು ಸಂಭ್ರಮದಿಂದ ಧರಿಸಿದರು. ಮಧ್ಯೆ ಮಧ್ಯೆ ಅದನ್ನು ಸರಿಮಾಡಿಕೊಳ್ಳುತ್ತಿದ್ದರು.





ಫ್ಲೆಬ್ರುವರಿ 1ರಂದು, ವಿವೇಕಾನಂದ ಸ್ಮಾರಕಕ್ಕೆ ಹೆಸರಾದ ಆಲ್ಮೋರಾಕ್ಕೆ ಗುರುಗಳು ಭೇಟಿ ನೀಡಿದರು. ಸ್ಮಾರಕದ ಬಳಿ ಬಂದಾಗ ಗುರುಗಳು ಉದ್ಗರಿಸಿದರು, ಇಲ್ಲಿ ನಾನು 1958ರಲ್ಲಿ ಧ್ಯಾನ ಮಾಡಿದ್ದೆ. ಅದು ನಾನು ಸಹಜಮಾರ್ಗಕ್ಕೆ ಸೇರುವ ಆರು ವರ್ಷಗಳ ಮೊದಲು. ಇದು ಸ್ವಾಮಿ ವಿವೇಕಾನಂದರು ಪಾದಸ್ಪರ್ಶ ಮಾಡಿರುವ ಸ್ಥಳವೆಂದು ನಾನು ಖಂಡಿತವಾಗಿ ಹೇಳುತ್ತೇನೆ. ಅಭ್ಯಾಸಿಯೊಬ್ಬರ ಮನೆಯಲ್ಲಿ ಮಧ್ಯಾಹ್ನದ ಭೋಜನ ಸ್ವೀಕರಿಸಿದ ಗುರುಗಳು ತಮ್ಮನ್ನು ಕಾಣುವ ಪ್ರತೀಕ್ಷೆಯಲ್ಲಿದ್ದ ಕೆಲ ಅಭ್ಯಾಸಿಗಳೊಡನೆ ಸಮಯ ಕಳೆದರು. ಒಬ್ಬ ವಿದ್ಯಾರ್ಥಿ ಕೇಳಿದ ಪ್ರಶ್ನೆ; ಯಾವುದು ಪ್ರಧಾನ ವ್ಯಾಸಂಗವೋ ಅಥವಾ ಧ್ಯಾನವೊ? ವಿದ್ಯಾರ್ಥಿಯ ಲಕ್ಷ್ಯವಿರಬೇಕಾದುದು ವ್ಯಾಸಂಗದಲ್ಲಿ . ತನ್ನ ಪತಿಯು ಧ್ಯಾನ ಮಾಡಲು ಏನು ಮಾಡಬೇಕೆಂದು ಒಬ್ಬ ಸೋದರಿ ಕೇಳಿದರು. ಅವರಿಗೆ ಒತ್ತಾಯ ಮಾಡಬೇಡಿ. ನೀವು ಅಭ್ಯಾಸಮಾಡಿ, ಒಬ್ಬ ಪರಿಪೂರ್ಣ ವ್ಯಕ್ತಿಯಾಗಿ ಪರಿವರ್ತನೆ ಹೊಂದಿ, ಅವರು ನಿಮ್ಮನ್ನು ಅನುಕರಿಸುವಂತೆ ಮಾಡಿ.




ಪಾಶ್ಚಾತ್ಯ ಕಾಲಮಾನದಂತೆ ಪೂಜ್ಯ ಲಾಲಾಜಿ ಮಹಾರಾಜರ ಜನ್ಮದಿನ ಫ್ಲೆಬ್ರುವರಿ 2ರಂದು. ಸತ್ಸಂಗ ಮುಗಿದ ತಕ್ಷಣವೇ ಅಭ್ಯಾಸಿಯೊಬ್ಬರು ಬೇರೊಂದು ಕಾರ್ಯದಲ್ಲಿ ಮಗ್ನರಾದುದನ್ನು ಕಂಡು ಗುರುಗಳು ಹೇಳಿದರು, ನಾವು ನಮ್ಮ ಆಂತರಿಕ ಸ್ಥಿತಿ ಕುರಿತು ಚಿಂತಿಸಬೇಕು. ಸತ್ಸಂಗ ಮುಗಿದ ತಕ್ಷಣ ಇತರ ಚಟುವಟಿಕೆಯಲ್ಲಿ ತೊಡಗಬೇಡಿ. ಲಾಲಾಜಿ ಮಹಾರಾಜರ ಜೀವನವನ್ನು ಕುರಿತ ಡಿ.ವಿ.ಡಿ.ಯೊಂದನ್ನು ಬಿಡುಗಡೆಮಾಡಿದ ಅವರು, ಸಹಜಮಾರ್ಗ ಗುರುಪರಂಪರೆ ಆಧರಿಸಿದ ಒಂದು ವಿಡಂಬನೆಯನ್ನು ನೋಡಿ ಆನಂದಿಸಿದರು. ಒಂದು ಉಪನ್ಯಾಸ ನೀಡಿ 'ಪಿಸುಮಾತುಗಳು – ಸಂಪುಟ 2 ಮತ್ತು 3'ರ ಪ್ರಕಟಣೆಯ ಬಗ್ಗೆ ಹೇಳಿದರು. ಫ್ಲೆಬ್ರುವರಿ 3ರಂದು ಗುರುಗಳು ಸುಂದರ ತಾಣವಾದ ನೌಕುಚಿಯತಾಲಿಗೆ ಭೇಟಿ ನೀಡಿದರು. ಒಂದು ಅನೌಪಚಾರಿಕ ಸಂವಾದದಲ್ಲಿ ಅವರು ಹೇಳಿದರು, ಮುಖ ಗಂಟಿಕ್ಕಿಕೊಳ್ಳುವವರಿಂದ ತಪ್ಪಿಸಿಕೊಂಡು ಓಡಾಡಿ. ಸಂತರ ಮುಖ ಸದಾ ಆನಂದವನ್ನು ಹೊರಸೂಸಬೇಕು. ಸೂಕ್ತ ವ್ಯಕ್ತಿಗೆ ನಿಷ್ಠೆ, ಸೂಕ್ತ ಸಮಯದಲ್ಲಿ ತೋರುವ ಪ್ರಾಮಾಣಿಕತೆ ಮತ್ತು ನಿಯತ್ತು ಇವು ಆಧ್ಯಾತ್ಮಿಕತೆಯ ಬೆಳವಣಿಗೆಯಲ್ಲಿ ಸಹಕಾರಿ.




ಫ್ಲೆಬ್ರುವರಿ 5ರಂದು ಗುರುಗಳು ದೆಹಲಿಗೆ ಹೋಗುವ ಮಾರ್ಗದಲ್ಲಿ ಹಾಪುರವೆಂಬಲ್ಲಿ ಆಶ್ರಮವನ್ನು ಉದ್ಘಾಟಿಸಿದರು. ಸೋನೆಪತ್ ಆಶ್ರಮದ ಉದ್ಘಾಟನೆ ನಡೆದದ್ದು ಫ್ಲೆಬ್ರುವರಿ 7ರಂದು. ಅವರು ಸಂತೋಷವಾಗಿದ್ದು, ಅವರ ಮನೋಭಾವ ವಿನೋದಪೂರಿತವಾಗಿತ್ತು. ಸತ್ಸಂಗದ ನಂತರ ಉಪನ್ಯಾಸ ನೀಡುತ್ತ ನುಡಿದರು, ಮೌನ ದೇವರ ಭಾಷೆ, ಪ್ರೇಮಕ್ಕಂತೂ ಭಾಷೆ ಎಂಬುದೇ ಇಲ್ಲ. ಶಿಸ್ತಿಲ್ಲದೆ ಪ್ರೇಮವಿಲ್ಲ ಮತ್ತು ಆಧ್ಯಾತ್ಮಿಕತೆ ಇಲ್ಲದೆ ಶಿಸ್ತಿಲ್ಲ. ಇದಕ್ಕೆ ಇಂಬುಕೊಡುತ್ತ ಮತ್ತೂ ನುಡಿದರು, ಪ್ರೇಮಕ್ಕೆ ಧರ್ಮವಾಗಲಿ ಅಥವಾ ಚೌಕಟ್ಟಾಗಲಿ ಇಲ್ಲ. ಭೇದಭಾವಗಳ ನಿರಾಕರಣದಿಂದ ಮಾತ್ರವೇ ನಮ್ಮೆಲ್ಲರ ಹೃದಯಗಳಲ್ಲಿ ಪ್ರೇಮ ಮತ್ತು ವಿಶ್ವಭ್ರಾತೃತ್ವಗಳ ಜ್ಯೋತಿಯನ್ನು ಹೊತ್ತಿಸಬಹುದು. ಸೋದರ ಗುರುಪ್ರೀತರು ಮಧುರ ಕಂಠದಿಂದ ಹಾಡಿದ ಕೆಲ ಭಕ್ತಿಗೀತೆಗಳು ಧ್ಯಾನಮಂದಿರದಲ್ಲಿ ಅನುರಣಿಸಿದವು.

ಗುರುಗಳು ಫ್ಲೆಬ್ರುವರಿ 8ರಂದು ಜೈಪುರಕ್ಕೆ ಭೇಟಿ ನೀಡಿದಾಗ ಅವರ ದರ್ಶನಕ್ಕಾಗಿ ಕಾದು ನಿಂತಿದ್ದ ಅಭ್ಯಾಸಿಗಳ ಮುಖದಲ್ಲಿ ಸಂತೋಷದ ಚಿಲುಮೆ ಉಕ್ಕುತ್ತಿತ್ತು. 10ರ ಬೆಳಿಗ್ಗೆ, ಮುಂಚೆಯೆ ಬಂದು ಕುಳಿತಿದ್ದ ಸುಮಾರು 2300 ಅಭ್ಯಾಸಿಗಳಿಗೆ ಗುರುಗಳು ಸತ್ಸಂಗವನ್ನು ನಡೆಸಿದರು. ತಮ್ಮ ಮಕ್ಕಳಿಗೆ ಹೆಸರಿಡಿಸಲು ಕೆಲ ಅಭ್ಯಾಸಿಗಳು ಅವರನ್ನು ಕರೆತಂದಿದ್ದಾಗ, ಗುರುಗಳು, ತಾವಿಟ್ಟ ಹೆಸರಿನ ಮುಂದೆ ಜಾತಿಸೂಚಕ ಅಥವಾ ವಂಶಾವಳಿಯ ಹೆಸರುಗಳನ್ನು ಜೋಡಿಸಬಾರದೆಂಬ ಏಕಮಾತ್ರ ನಿಬಂಧನೆಯ ಮೇರೆಗೆ ತಾವು ಇನ್ನು ಮುಂದೆ ಹೆಸರಿಡುವುದಾಗಿ ಹೇಳಿದರು. ತನ್ನ ಪತಿ ಮಿಷನ್ನಿಗೆ ಸೇರಿಲ್ಲವೆಂದು ತಿಳಿಸಿದ ಸೋದರಿಯೊಬ್ಬರಿಗೆ ಆತ ಬರುವರೆಂದು ಗುರುಗಳು ಹೇಳಿದರು. ನಿಧಾನವಾಗುವುದು ನಕಾರಾತ್ಮಕ ಆಲೋಚನೆಗಳಿಂದ, ನೀವು ಅವರನ್ನು ಕರೆತರಬೇಕು.



11ರ ಬೆಳಿಗ್ಗೆ ಸತ್ಸಂಗದ ನಂತರ, 'ಗುರಿ' ವಿಷಯವನ್ನು ಆಧರಿಸಿದ ಮಹಾಭಾರತದ ನಾಟಕವೊಂದನ್ನು ಪ್ರದರ್ಶಿಸಲಾಯಿತು. ಒಂದು ಅನೌಪಚಾರಿಕ ಸಂವಾದದಲ್ಲಿ ಗುರುಗಳು, ಪೂರ್ವನಿರ್ಧಾರಿತ ಜೀವನವೆಂಬುದೇ ಇಲ್ಲವೆಂದು ನುಡಿದರು. ಒಂದು ದೃಷ್ಟಿಯಲ್ಲಿ, ಏನು ಬೇಕಾದರೂ ನಡೆಯಬಹುದು, ಆದರೆ ಏನು ನಡೆಯುವುದು ಎಂಬುದು ನಮ್ಮ ಇಚ್ಛಾಶಕ್ತಿಯನ್ನು ಅವಲಂಬಿಸಿದೆ.

ಗುರುಗಳು 12ರ ಮಧ್ಯಾಹ್ನ, ಜೈಪುರದಿಂದ ದೆಹಲಿಯ ಜ್ಹೋನಲ್ ಆಶ್ರಮಕ್ಕೆ ಬಂದರು, ಮತ್ತು ಸಂಜೆ ಸತ್ಸಂಗ ನಡೆಸಿಕೊಟ್ಟರು. ಎಲ್ಲೆಡೆಯಲ್ಲೂ ಹಬ್ಬದ ವಾತಾವರಣ ಸೃಷ್ಟಿಯಾಗಿತ್ತು. ಅಲ್ಲಿನ ಕುಟೀರದಲ್ಲಿ ಅವರು ರಾತ್ರಿ ಉಳಿದುಕೊಂಡಿದ್ದು ಇದೇ ಮೊದಲ ಬಾರಿ. ಬೆಳಿಗ್ಗೆ ಸತ್ಸಂಗ ನಡೆಸಿ, ಮಧ್ಯಾಹ್ನದ ವೇಳೆಗೆ ಅವರು ಭೋಪಾಲಕ್ಕೆ ಹೊರಟರು. ಭೋಪಾಲದಲ್ಲಿ ಫ್ಲೆಬ್ರುವರಿ 15ರಂದು ಧ್ಯಾನ ಮಂದಿರವನ್ನು ಉದ್ಘಾಟಿಸಿದರು. ಆಶ್ರಮವು ಭೋಪಾಲದಿಂದ ಹದಿನೈದು ಕಿ.ಮೀ. ದೂರದ ಅದಂಪುರ ಛಾವಣಿ ಎಂಬ ಹಳ್ಳಿಯಲ್ಲಿದೆ. ಸತ್ಸಂಗದ ನಂತರ ಎರಡು ಮದುವೆಗಳು ನಡೆದವು. ಅನಂತರ ಗುರುಗಳು ರಸ್ತೆ ಮಾರ್ಗವಾಗಿ ಇಂದೂರಿಗೆ ತೆರಳಿ, 16ರಂದು ಅಲ್ಲಿನ ಆಶ್ರಮದ ಧ್ಯಾನಮಂದಿರವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸೋದರ ಅಜಯ ಭಟ್ಟರರು ಮಾತನಾಡುತ್ತ, ಆಶ್ರಮವನ್ನು ಧ್ಯಾನಕ್ಕಾಗಿ ಬಳಸಬೇಕು ಮತ್ತು ಗುರುವನ್ನು ನಮ್ಮ ಏಕಮಾತ್ರ ಗುರಿಯಾಗಿರಿಸಿಕೊಂಡು ಆತನನ್ನು ನಮ್ಮೊಳಗೆ ಅನ್ವೇಷಣೆ ಮಾಡಬೇಕು ಎಂದರು. ಭವಿಷ್ಯದಲ್ಲಿ ಹೆಚ್ಚು ಜನರು ಆಧ್ಯಾತ್ಮವನ್ನು ಸ್ವೀಕರಿಸುವರೆಂದೂ ಅವರು ನುಡಿದರು. ಆಶ್ರಮವು ನಗರದ ಒಳಭಾಗದಲ್ಲೇ ಇದ್ದು, ಸುಮಾರು 800 ಜನ ಕುಳಿತುಕೊಳ್ಳುವಷ್ಟು ದೊಡ್ಡದಾಗಿದೆ. ಗುರುಗಳು 18ರ ಬೆಳಿಗ್ಗೆ ಮುಂಬಯಿ ತಲುಪಿ ಅಲ್ಲಿ ಒಂದು ದಿನ ತಂಗಿದ್ದರು. ಪ್ರವಾಸವನ್ನು ಮುಂದುವರೆಸುವ ಮುನ್ನ ಅಲ್ಪ ವಿಶ್ರಾಂತಿಗೆಂದು 19ರಂದು ಕೊಲ್ಕತಾಗೆ ತೆರಳಿದರು.

ಶ್ರೀ ರಾಮಚಂದ್ರ ಮಿಷನ್
ಎಖೋಸ್ ಇಂಡಿಯ

ಪ್ರಧಾನ ಕೇಂದ್ರ

ಮಾರ್ಚ್ 2009 ಆಂತರಿಕ ಪ್ರಸಾರಕ್ಕಾಗಿ ಮಾತ್ರ ಸಂಪುಟ 2 ಸಂಚಿಕೆ 2


## ಪ್ರಬಂಧ ಸ್ಪರ್ಧೆಯ ಫಲಿತಾಂಶ




2009ರ ಪ್ರಬಂಧ ಸ್ಪರ್ಧೆಯಲ್ಲಿ ದೇಶಾದ್ಯಂತ ಸುಮಾರು 75000 ವಿದ್ಯಾರ್ಥಿಗಳು ಪಾಲ್ಗೊಂಡಿದ್ದು, ಫಲಿತಾಂಶ ಹೊರಬಿದ್ದಿದೆ. ಸ್ಪರ್ಧೆಯು ಇಂಗ್ಲೀಷ್, ಹಿಂದಿ ಹಾಗು ಅನೇಕ ಪ್ರಾದೇಶಿಕ ಭಾಷೆಗಳಲ್ಲೂ ನಡೆಯಿತು. ಕಿರಿಯರ ವಿಭಾಗದಲ್ಲಿ ವಿಷಯ 'ಸತ್ಯವೇ ಧೈರ್ಯ' ಎಂದಿದ್ದರೆ, ಹಿರಿಯರ ವಿಭಾಗದಲ್ಲಿ ಅದು 'ಆತ್ಮ ಗೌರವ ಮತ್ತು ಆತ್ಮ ವಿಶ್ವಾಸ ಚಾರಿತ್ರ್ಯವನ್ನು ರೂಪಿಸಬಲ್ಲದು' ಎಂದಿತ್ತು.

ಕಿರಿಯ ವಿಭಾಗದ ಇಂಗ್ಲೀಷ್ ಭಾಷೆಯಲ್ಲಿ ವಿಜೇತರು: ಆಕಾಂಕ್ಷ(ಪುಣೆ), ಅಮಲ್(ದೆಹಲಿ), ಸುಷ್ಮಾ(ಹೈದರಾಬಾದ್), ಅರ್ಹನ್(ವಡಗರ, ಕೇರಳ), ದೇವಪ್ರಿಯಾ(ರಾಂಚಿ), ದಿವ್ಯ(ಘಾಝಿಪುರ,ಉ.ಪ್ರ.), ನೈನಾ(ಮೊಹಾಲಿ), ಸಾನಿಕಾ(ನಾಸಿಕ್) ಮತ್ತು ಸಿದ್ಧಾಂತ್(ಶಕ್ತಿನಗರ,ಉ.ಪ್ರ.)


ಹಿರಿಯರ ವಿಭಾಗದ ವಿಜಯಶಾಲಿಗಳು:

ಅನುರಾಧ(ನೈನಿತಾಲ್), ನರೇಶ(ಜೈಪುರ), ಸಮೀನ(ಇಂದೂರು) ಅನೂಪ್(ನಾಮಕ್ಕಲ್,ತ.ನಾ.), ಸ್ನೇಹಲ್(ಪುಣೆ) ಮತ್ತು ವರುಣ್ (ಜಲಂಧರ್)




## ಹೊಸ ಪ್ರಕಟಣೆಗಳು

### 'ಲಾಲಾಜಿಯವರ ಜೀವನ' ಡಿವಿಡಿ ಸೆಟ್ ಮತ್ತು ಪುಸ್ತಕ




ಪೂಜ್ಯ ಲಾಲಾಜಿಯವರ ಜನ್ಮ ವಾರ್ಷಿಕೋತ್ಸವದ ಮಂಗಳಕರ ಸಂದರ್ಭದಲ್ಲಿ 'ಲಾಲಾಜಿಯವರ ಜೀವನ' ಎಂಬ ಡಿವಿಡಿ ಸೆಟ್ಟನ್ನು ಹೊರತರಲು ನಮಗೆ ಸಂತಸವಾಗಿದೆ. ಲಾಲಾಜಿ ಮಹಾರಾಜರ ಜೀವನ ಮತ್ತು ಬೋಧನೆಯನ್ನಾಧರಿಸಿದ ಈ ಚಲನಚಿತ್ರ ಅನೇಕ ವರ್ಷಗಳ ಹಿಂದೆ ಪುಣೆ ಕೇಂದ್ರದ ಅಭ್ಯಾಸಿಗಳಿಂದ ಅಭಿನಯಿಸಲ್ಪಟ್ಟು, ನಿರ್ಮಾಣಗೊಂಡು ವೀಡಿಯೊ ಸುರುಳಿಯಾಗಿ ಬಿಡುಗಡೆಯಾಗಿತ್ತು. ನಿರಂತರ ಮತ್ತು ಜನಪ್ರಿಯ ಬೇಡಿಕೆಯಿಂದಾಗಿ, ಇದು ಲಾಲಾಜಿ ಮಹಾರಾಜರ ಕೆಲವು ಅಪರೂಪ ಭಾವಚಿತ್ರಗಳೊಡನೆ ಒಂದು ಚಿತ್ತಾಕರ್ಷಕ ಡಿವಿಡಿ ಸೆಟ್ ಮತ್ತು ಪುಸ್ತಕ ರೂಪದಲ್ಲಿ ಮರು ಪ್ರಕಟವಾಗಿದೆ.

### ಸಹಜಮಾರ್ಗ ಕೈಪಿಡಿ




ಈ ಕೈಪಿಡಿ ಆಧ್ಯಾತ್ಮಿಕ ಆಕಾಂಕ್ಷಿಗಳಿಗೆ ಸಹಜಮಾರ್ಗ ಧ್ಯಾನಪದ್ಧತಿ ಕುರಿತು ಒಂದು ಅದ್ಭುತ ಪರಿಚಯವಾಗಿದೆ. ಸಹಜಮಾರ್ಗ ಸೇರಲಿಚ್ಛಿಸುವ ಎಲ್ಲ ಅಭ್ಯರ್ಥಿಗಳಿಗೆ ನೀಡಲು ಈ ಅಧಿಕೃತವಾದ ಪರಿಚಯಾತ್ಮಕ ಕೈಪಿಡಿಯನ್ನು ಶಿಫಾರಸು ಮಾಡಲಾಗಿದೆ. ಇದರಲ್ಲಿ ಸಹಜಮಾರ್ಗ ಸಾಧನೆಯ ಎಲ್ಲ ಪ್ರಮುಖ ಲಕ್ಷಣಗಳು ಅಡಕವಾಗಿದ್ದು, ಸ್ಥಳೀಯ ಸಂಪರ್ಕದ ಮಾಹಿತಿಯೂ ಇದೆ. ಸಹಜಮಾರ್ಗದ ಮಾಹಿತಿ ನೀಡುವ ಅಧಿವೇಶನಗಳಲ್ಲಿ ಇದನ್ನು ಬಳಸಬಹುದಾಗಿದೆ.



## ಭಾರತದಲ್ಲಿ ಮಿಷನ್ನಿನ ಕಾರ್ಯಾಚರಣೆಯ ಪುನರ್‌ಪರಿಶೀಲನೆ

ತಮಿಳುನಾಡಿನ ಸುಗ್ಗಿಯ ಹಬ್ಬವಾದ ಪೊಂಗಲ್‌ನ ಹಿಂದಿನ ವಾರ, ಚೆನ್ನೈನ ಬಾಬೂಜಿ ಸ್ಮಾರಕ ಆಶ್ರಮದಲ್ಲಿ ವಿವಿಧ ಚಟುವಟಿಕೆಗಳು ಕಂಡು ಬಂದವು. ಇಲ್ಲಿ ಜನವರಿ 10ರಿಂದ 12ರವರೆಗೆ ಮೂರು ದಿನಗಳು, ತಮ್ಮ ಕಾರ್ಯಾಚರಣೆಯನ್ನು ತೀವ್ರವಾಗಿ ಪುನರ್ಪರಿಶೀಲಿಸಲು ಸುಮಾರು 200 ಜನ ಮಿಷನ್ನಿನ ಕಾರ್ಯನಿರ್ವಾಹಕರು ಅಂದರೆ ಕಾರ್ಯಕಾರಿ ಸಭೆಯ ಸದಸ್ಯರು, ಭಾರತದಾದ್ಯಂತ ಬಂದ ಕೆಲವು ಮುಖ್ಯಸ್ಥರು ಮತ್ತು ಕೇಂದ್ರದ ಮುಖ್ಯಸ್ಥರು – ಸೇರಿದ್ದರು.

ಜನವರಿ 10ರಂದು ಗುರುಗಳು ವಲಯ ಮುಖ್ಯಸ್ಥರನ್ನು ಉದ್ದೇಶಿಸಿ ಮಾತನಾಡಿದರು ಮತ್ತು ಮರುದಿನ ಎಲ್ಲ ಸಭಾಸದರನ್ನು ಕುರಿತು ಮಾತನಾಡಿದರು. ಈ ಎರಡು ಭಾಷಣಗಳಲ್ಲೂ ಅವರು ಮಿಷನ್ನಿನಲ್ಲಿ ಶಿಸ್ತಿನ ಮಟ್ಟ ಹಿಂಜರಿತವಾಗಿರುವುದರ ಬಗ್ಗೆ ವಿಷಾದ ವ್ಯಕ್ತಪಡಿಸುತ್ತ, ಶಿಸ್ತಿನ ನಿರ್ಲಕ್ಷ್ಯವಾದರೆ ಅದು ಮಿಷನ್ನಿನ ಸದಸ್ಯತ್ವ ಛಿದ್ರಗೊಳ್ಳುವುದಕ್ಕೆಡೆ ಮಾಡುವುದೆಂದರು. ಬಾಬೂಜಿಯವರು ವಿವಿಧ ಜಾತಿ ಮತ್ತು ಧರ್ಮಗಳಿಗೆ ಸೇರಿದ ಅಭ್ಯಾಸಿಗಳನ್ನು ಒಂದುಗೂಡಿಸುವ ದಿಸೆಯಲ್ಲಿ ತಾವು ವಿಫಲರಾಗಿರುವರೆಂದು 1966ರಲ್ಲಿ ವಿಷಾದಪೂರ್ವಕವಾಗಿ ಘೋಷಣೆ ಮಾಡಿದ ನಾಲ್ಕು ದಶಕಗಳ ನಂತರವೂ ಮಿಷನ್ನಿನಲ್ಲಿ ಜಾತಿಭೇದಗಳೇನೂ ಕಣ್ಮರೆಯಾಗಿಲ್ಲವೆಂದು ಅವರು ಮರುಗಿದರು.

ಗುರುಗಳನ್ನು ದೈವೀಸ್ತರದಲ್ಲಿ ಪ್ರೀತಿಸುವುದಂತೂ ನಮ್ಮಿಂದಾಗುತ್ತಿಲ್ಲ; ನಮಗಿರುವ ಸುಲಭ ಮಾರ್ಗವಾದ ಆತನ ಸೇವೆ ಮಾಡುವುದರಿಂದ ಆತನ ಅನುಗ್ರಹವನ್ನು ಆಕರ್ಷಿಸಬಹುದೆಂದು ಗುರುಗಳು ನುಡಿದರು.

ಒಟ್ಟಿನಲ್ಲಿ, ಗುರುಗಳು ತಮ್ಮ ಇತ್ತೀಚಿನ ಉಪನ್ಯಾಸ ಮತ್ತು ಟೀಕೆಗಳಲ್ಲಿ ಪದೇಪದೇ ನೆನಪಿಸುತ್ತಿರುವ ನಮ್ಮ ಬಾಹ್ಯಪರಿವರ್ತನೆಯ ಕೊರತೆಯ ಬಗ್ಗೆ ಅವರ ಮೌಲ್ಯನಿರ್ಣಯವನ್ನು ಕೇಳುವುದೊಂದು ಯಾತನಾಮಯ ಅನುಭವ.

ಕೇಂದ್ರಗಳ ಮುಖ್ಯಸ್ಥರಿಗಾಗಿ ನಡೆದ ಕಾರ್ಯಾಗಾರದಲ್ಲಿ, ಸದಸ್ಯರಿಗೆ ಕೇಂದ್ರಗಳ ನಿರ್ವಹಣೆ ಲೆಕ್ಕಪತ್ರ, ಪ್ರಕಟಣೆಗಳು, ಸುರಕ್ಷೆ, ಸದಸ್ಯತ್ವದ ನಿರ್ವಹಣೆ ಮುಂತಾದ ವಿಷಯಗಳನ್ನು ಕುರಿತು ಇತ್ತೀಚಿನ ಮಾಹಿತಿಯನ್ನು ಪ್ರಸ್ತುತಪಡಿಸಲಾಯಿತು. ಸದಸ್ಯರು ಮಾಹಿತಿಯನ್ನು ಮಂಡಿಸಿದವರೊಡನೆ ಉಪಯುಕ್ತವಾಗಿ ಪ್ರತಿಸ್ಪಂದಿಸಿ ತಮ್ಮ ಸಂದೇಹಗಳನ್ನು ನಿವಾರಿಸಿಕೊಂಡರು. ಈ ಕಾರ್ಯಕ್ರಮವನ್ನು ಪ್ರತಿ ಎರಡು ವರ್ಷಗಳಿಗೊಮ್ಮೆ ಪುನರಾವರ್ತಿಸುವ ಯೋಜನೆ ಇದೆ.




### ವಿಶೇಷ ಪ್ರಕಟಣೆ

'ದಿವ್ಯಲೋಕದಿಂದ ಪಿಸುಮಾತುಗಳು– ದ್ವಿತೀಯ ದರ್ಶನ' ವು ಏಪ್ರಿಲ್ 30, 2009ರಂದು ಬಿಡುಗಡೆಯಾಗಲಿದೆ.

ಸ್ವಯಂಪ್ರೇರಿತ ದೇಣಿಗೆ ನೀಡಿ ನಾವು ನಮ್ಮ ವಿಶೇಷ ಆವೃತ್ತಿಯ ಪ್ರತಿಗಳನ್ನು ಪಡೆಯಲು ನಮ್ಮ ಪ್ರೀತಿಯ ಗುರುಗಳು ಅನುವು ಮಾಡಿಕೊಟ್ಟಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ನಿಮ್ಮ ಸ್ಥಳೀಯ ಎಸ್.ಆರ್.ಸಿ.ಎಂ. ನಿರ್ವಾಹಕರನ್ನು ದಯಮಾಡಿ ಸಂಪರ್ಕಿಸಿ.

ಶ್ರೀ ರಾಮಚಂದ್ರ ಮಿಷನ್
ಎಖೋೀಸ್ ಇಂಡಿಯ
ವಲಯ ಸುತ್ತುವರಿ
ಮಾರ್ಚ್ 2009 ಆಂತರಿಕ ಪ್ರಸಾರಕ್ಕಾಗಿ ಮಾತ್ರ ಸಂಪುಟ 2 ಸಂಚಿಕೆ 2



# ಪೂಜ್ಯ ಲಾಲಾಜಿ ಮಹಾರಾಜರ ಜನ್ಮದಿನೋತ್ಸವ:

## ಅಲುವಾ,ಕೇರಳ

ಕೇರಳದ ಅಲುವಾ ಕೇಂದ್ರದಲ್ಲಿ ಬೆಳಿಗ್ಗೆ 9.00 ಮತ್ತು ಸಂಜೆ 5.00 ಗಂಟೆಯ ಸತ್ಸಂಗಗಳ ಜೊತೆಗೆ ಪೂರ್ಣದಿನದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಪೂಜ್ಯ ಲಾಲಾಜಿಯವರ ಜೀವನ ಕುರಿತು ತೋರಿಸಲಾದ ಒಂದು ವೀಡಿಯೋದಲ್ಲಿ ನಮ್ಮ ಆದಿಗುರುಗಳು ನೀಡಿರುವ ಸಹಜ ಮಾರ್ಗ ಸಿದ್ಧಾಂತಗಳೇ ತುಂಬಿದ್ದವು. ವೀಡಿಯೊ ಹಿಂದಿ ಭಾಷೆಯಲ್ಲಿದ್ದ ಕಾರಣ, ಅಭ್ಯಾಸಿಗಳಿಗೆ ಸುಲಭವಾಗಿ ಅರ್ಥವಾಗಲೆಂದು ಅದನ್ನು ಮಲೆಯಾಳಂ ಭಾಷೆಗೆ ಅನುವಾದಿಸಲಾಯಿತು. ನೆರೆದಿದ್ದ ಎಲ್ಲರಿಗೂ ತೃಪ್ತಿಯಾಗಲೆಂದು ಅನುವಾದವನ್ನು ಮಧ್ಯಂತರಗಳಲ್ಲಿ ಓದಲಾಯಿತು. ಇದು ಎಲ್ಲರೂ ನಿರಂತರ ಸ್ಮರಣೆಯಲ್ಲಿರಲು ನೆರವಾಯಿತು; ಉತ್ಸವದ ಉದ್ದೇಶವೂ ಅದೇ ಆಗಿತ್ತು.

## ಗುಲ್ಬರ್ಗಾ, ಕರ್ನಾಟಕ

ಒಂದು ದಿನದ ಕಾರ್ಯಕ್ರಮದಲ್ಲಿ ಗುಲ್ಬರ್ಗಾ ಜಿಲ್ಲೆಯ ವಿವಿಧ ಸ್ಥಳಗಳಿಂದ ಬಂದ ಸುಮಾರು 280 ಅಭ್ಯಾಸಿಗಳು ಮತ್ತು 70 ಮಕ್ಕಳು ಪಾಲ್ಗೊಂಡಿದ್ದರು. ಅಭ್ಯಾಸಿಗಳು ಉತ್ಸವಕ್ಕೆ ಒಂದು ದಿನ ಮುಂಚಿತವಾಗಿಯೇ ಬರತೊಡಗಿದ್ದರು ಮತ್ತು ಅಭ್ಯಾಸಿಗಳ ಊಟ ವಸತಿಗಳಿಗಾಗಿ ವ್ಯವಸ್ಥೆ ಮಾಡಲಾಗಿತ್ತು. ಫೆಬ್ರುವರಿ 2ರಂದು ಬೆಳಿಗ್ಗೆ 9.00 ಗಂಟೆಗೆ ಸತ್ಸಂಗ ನಡೆಯಿತು. ಉಪಾಹಾರದ ನಂತರ ಲಾಲಾಜಿ ಮಹಾರಾಜರ ಜೀವನವನ್ನು ಕುರಿತ ಒಂದು ವೀಡಿಯೊ ತೋರಿಸಲಾಯಿತು. ಮಧ್ಯಾಹ್ನ ಭೋಜನಾನಂತರ, ಮಕ್ಕಳಿಂದ ಗೀತೆ ಮತ್ತು ಕವಿತೆಗಳು ಹಾಗು ಅಭ್ಯಾಸಿಗಳಿಂದ ಭಕ್ತಿಗೀತೆಗಳ ಕಾರ್ಯಕ್ರಮ ನಡೆಯಿತು. ಸಂಜೆ 5.00ಕ್ಕೆ ಸತ್ಸಂಗವಿತ್ತು. ಇಡೀ ದಿನ ವಿಶೇಷ ಅನುಗ್ರಹದ ವಾತಾವರಣವಿದ್ದು, ಇದನ್ನು ಅನೇಕ ಅಭ್ಯಾಸಿಗಳು ವ್ಯಕ್ತಪಡಿಸಿದರು. ಕಾರ್ಯಕ್ರಮ ಒಂದು ಸರಳ ವ್ಯವಸ್ಥೆಯಾಗಿದ್ದು, ಪ್ರೇಮದಿಂದ ಕೂಡಿತ್ತು ಮತ್ತು ಎಲ್ಲ ಅಭ್ಯಾಸಿಗಳ ಪ್ರಶಂಸೆಗೆ ಪಾತ್ರವಾಯಿತು.

## ವಿ.ಜಿ.ಟಿ., ಆಂಧ್ರಪ್ರದೇಶ

ಉತ್ಸವವು ಗುಂಟೂರು ಜಿಲ್ಲೆಯ ಖಾಝಿಪೇಟೆಯಲ್ಲಿ ಐವತ್ತು ಎಕರೆಯ ಹೊಚ್ಚ ಹೊಸ ಪ್ರಾದೇಶಿಕ ಆಶ್ರಮದಲ್ಲಿ ನಡೆಯಿತು. ಅಕ್ಕಪಕ್ಕದ ಉಪಕೇಂದ್ರಗಳಿಂದ ಮಕ್ಕಳೂ ಸೇರಿದಂತೆ 1000ಕ್ಕೂ ಮಿಗಿಲಾಗಿ ಅಭ್ಯಾಸಿಗಳು ಪಾಲ್ಗೊಂಡಿದ್ದರು.

ಬೆಳಗಿನ ಸತ್ಸಂಗವನ್ನು ಅನುಸರಿಸಿ ಬಂದದ್ದು ಲಾಲಾಜಿ ಮಹಾರಾಜರ ಜೀವನ ಚರಿತ್ರೆ ಮತ್ತು ಬೋಧನೆಗಳ ಪಠಣ. ಸಹಜಮಾರ್ಗದ ಸಾರವನ್ನೊಳಗೊಂಡ ರೇಖಾಚಿತ್ರ, ಕಂಠಪಾಠ ಮತ್ತು ಪುಟ್ಟ ವಿಡಂಬನೆಗಳನ್ನು ಪ್ರದರ್ಶಿಸಿದ ಮಕ್ಕಳ ಕಾರ್ಯಕ್ರಮ ಉತ್ಸಾಹದಾಯಕವಾಗಿದ್ದು, ಅದು ಮುಂದಿನ ಪೀಳಿಗೆಯ ಮೇಲೆ ಸಹಜ ಮಾರ್ಗ ಬೀರಿರುವ ಪ್ರಭಾವದ ಪ್ರಮಾಣವೆನಿಸಿ, ಆಧ್ಯಾತ್ಮಿಕ ವಿಕಾಸದ ಭರವಸೆಯನ್ನು ಮೂಡಿಸಿತು.

ಜಂಟಿ ಕಾರ್ಯದರ್ಶಿಗಳಾದ ಸೋದರ ಎ.ಪಿ.ದುರೈಯವರು ಕಾರ್ಯಕ್ರಮದಲ್ಲಿ ಭಾಗವಹಿಸಿ, ಅಭ್ಯಾಸಿಗಳನ್ನು ಹುರಿದುಂಬಿಸಿದರು. ಅವರು ಸಂಜೆಯ ಸತ್ಸಂಗ ನಡೆಸಿಕೊಟ್ಟು, ಅನಂತರ ಪ್ರಶಿಕ್ಷಕರ ಸಭೆಯ ಅಧ್ಯಕ್ಷತೆ ವಹಿಸಿದ್ದರು.

## ಕಟಕ್, ಒರಿಸ್ಸಾ

ಎರಡು ದಿನ ನಡೆದ ಉತ್ಸವದಲ್ಲಿ, ಒರಿಸ್ಸಾ ವಲಯದ ಎಲ್ಲ ಕೇಂದ್ರಗಳಿಂದ ಬಂದಿದ್ದ ಸುಮಾರು 160 ಅಭ್ಯಾಸಿಗಳು ಭಾಗವಹಿಸಿದ್ದರು.

ಫೆಬ್ರುವರಿ 1ರಂದು ಸತ್ಸಂಗದ ನಂತರ ಗುರುಗಳ ಉಪನ್ಯಾಸಗಳಿಂದಾಯ್ದ ಮಿಷನ್ನಿನ ಬೆಳವಣಿಗೆ, ಜಾಗತಿಕ ಹಿಂಜರಿತದ ಪ್ರಭಾವ, ಮಿಷನ್ನಿನ ಚಟುವಟಿಕೆಗಳನ್ನು ಉತ್ತಮ ಪಡಿಸುವ ಬಗ್ಗೆ ಮತ್ತು ಅಭ್ಯಾಸಿಗಳ ಅಧಿಕ ಸಂಖ್ಯೆಯ ಉಪಸ್ಥಿತಿ ಈ ವಿಷಯಗಳನ್ನು ಕುರಿತಂತೆ ಪ್ರಮುಖ ಅಂಶಗಳ ಚರ್ಚೆಯಾಯಿತು.

ಫೆಬ್ರುವರಿ 2ರಂದು, ಸತ್ಸಂಗವನ್ನು ಅನುಸರಿಸಿ ಬಂದದ್ದು, ಲಾಲಾಜಿಯವರು ಸಹಜ ಮಾರ್ಗ ಸಾಧನೆಯ ಅವಿಭಾಜ್ಯ ಅಂಗವೆಂದು ಒತ್ತು ಕೊಟ್ಟಿರುವ ತತ್ವಗಳನ್ನಾಧರಿಸಿದ ಒಂದು ಭಾಷಣ. ಸ್ವಯಂ-ಶಿಸ್ತಿನಂತಹ ಗುಣಗಳ ಬೆಳವಣಿಗೆ, ನಿಷ್ಕಾಮ ಸೇವೆ, ನಮ್ಮೊಳಗೆ ಪರಿವರ್ತನೆಯನ್ನು ಪರಿಣಾಮಕಾರಿಯಾಗಿ ತರಲು ನಮ್ಮ ಗುರುಗಳಿಗೆ ಸಹಾಯ ಮಾಡಲು ನಮ್ಮದೇ ಸಿದ್ಧತೆಗಳು ಇವು ಚರ್ಚಿತವಾದ ವಿಷಯಗಳು.

ಮುಂದಿನ ಅಧಿವೇಶನದಲ್ಲಿ ಗುರುಗಳಲ್ಲಿ ಮತ್ತು ಮಿಷನ್ನಿನಲ್ಲಿ ಶ್ರದ್ಧೆ ಬೆಳೆಸಿಕೊಳ್ಳುವುದು, ಆತ್ಮಾವಲೋಕನಗಳ ಬಗ್ಗೆ ಅಭ್ಯಾಸಿಗಳು ತಮ್ಮ ಸ್ವಂತ ಅನುಭವಗಳನ್ನು ಹಂಚಿಕೊಂಡರು. ಸಂಜೆ, ಚಿಣ್ಣರು ಮತ್ತು ಕೆಲ ಯುವ ಅಭ್ಯಾಸಿಗಳು ಸಾಂಸ್ಕೃತಿಕ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಎಲ್ಲರೂ ಆ ಸ್ಥಳದ ದೈವಾನುಗ್ರಹ ಪಡೆದು, ಆತನ ಕೃಪೆಗೆ ಪಾತ್ರರಾದರು.

## ಮುಂಬಯಿ, ಮಹಾರಾಷ್ಟ್ರ

ಉತ್ಸವದಲ್ಲಿ ಬಹುಸಂಖ್ಯೆಯಲ್ಲಿ ಭಾಗವಹಿಸಿದ ಮುಂಬಯಿ ಕೇಂದ್ರದ ಅಭ್ಯಾಸಿಗಳು ಉತ್ಸಾಹಪೂರಿತರಾಗಿದ್ದರು. ಸತ್ಸಂಗದೊಂದಿಗೆ ಆರಂಭವಾದ ಭಾನುವಾರದ ಕಾರ್ಯಕ್ರಮ, ಭಜನೆಗಳು, ಲಾಲಾಜಿ ಮಹಾರಾಜರ ಜೀವನ ಚರಿತ್ರೆಯ ಪಠಣ ಮತ್ತು ಲಾಲಾಜಿಯವರ ಬೋಧನೆಗಳಿಂದಾಯ್ದ 'ಅಭ್ಯಾಸಿಗಳ ಕರ್ತವ್ಯ' ಎಂಬ ವಿಷಯದ ಮೇಲಿನ ಒಂದು ಭಾಷಣದೊಂದಿಗೆ ಮುಂದುವರೆಯಿತು. ಮಧ್ಯಾಹ್ನ, ಯುವ ತಂಡವೊಂದು ನಡೆಸಿಕೊಟ್ಟ 'ಮಧ್ಯಪ್ರಾಚ್ಯದ ಸೂಫಿ ಸಂತರು' ಎಂಬ ಲಘು ಕೃತಿ ಚಿಂತನಶೀಲವಾಗಿತ್ತು.

ಫೆಬ್ರುವರಿ 2ರಂದು, ಸತ್ಸಂಗದ ನಂತರ ಸೋದರಿಯರಿಂದ ಭಜನೆಗಳು ಮತ್ತು ಚಿಣ್ಣರಿಂದ ವಿಡಂಬನೆಗಳ ಪ್ರದರ್ಶನವಿತ್ತು. ಮಧ್ಯಾಹ್ನ ಎಲ್ಲರೂ ಲಾಲಾಜಿಯವರ ಬೋಧನೆಗಳ ಸಾರವನ್ನು ಮೈಗೂಡಿಸಿಕೊಳ್ಳುವ ಸಲುವಾಗಿ 'ಲಾಲಾಜಿ ಮಹಾರಾಜರ ಜೀವನ ಚರಿತ್ರೆ' ಚಲನಚಿತ್ರವನ್ನು ಪ್ರದರ್ಶಿಸಲಾಯಿತು. ಆಶ್ರಮದ ವಾತಾವರಣ ಆನಂದದಾಯಕವಾಗಿದ್ದು, ಸಂಜೆಯ ಸತ್ಸಂಗದೊಂದಿಗೆ ಎರಡು ದಿನಗಳ ಕಾರ್ಯಕ್ರಮ ಕೊನೆಗೊಂಡಿತು ಮತ್ತು ಎಲ್ಲರೂ ಅನುಗ್ರಹ ಪೂರಿತರಾಗಿ ಹಿಂತಿರುಗಿದರು.

## ಅಹಮದ್‌ನಗರ, ಮಹಾರಾಷ್ಟ್ರ

ಈ ಮಂಗಳಕರ ಉತ್ಸವದಲ್ಲಿ ಮಹಾರಾಷ್ಟ್ರದ ಅನೇಕ ಕೇಂದ್ರಗಳಿಂದ ಬಂದ ಸುಮಾರು 216 ಅಭ್ಯಾಸಿಗಳು ಪಾಲ್ಗೊಂಡಿದ್ದರು. ಬೆಳಗಿನ ಸತ್ಸಂಗದ ನಂತರ, ಲಾಲಾಜಿ ಮಹಾರಾಜರ ನೆನಪಿನಲ್ಲಿ, ಭಜನೆಗಳು, ಚಿಣ್ಣರಿಂದ ಪುಟ್ಟ ನಾಟಕಗಳು, ಚರ್ಚೆಗಳು ಮತ್ತು ಭಾಷಣಗಳು ಏರ್ಪಾಡಾಗಿದ್ದವು. ಜೊತೆಗೆ ಅಹಮದ್‌ನಗರ ಮತ್ತು ಸುತ್ತಮುತ್ತಲಿನ ಸ್ಥಳದ ಆಧ್ಯಾತ್ಮಿಕ ಆಕಾಂಕ್ಷಿಗಳಿಗಾಗಿ ಒಂದು 'ಮುಕ್ತ ಸಭೆ' ವ್ಯವಸ್ಥೆಯಾಗಿತ್ತು. ಇದನ್ನು ನಡೆಸಿಕೊಟ್ಟವರು ಶಿರ್ವಾಲ್‌ನ ಸೋದರ ಆರ್.ಡಿ.ಕುಲಕರ್ಣಿ ಮತ್ತು ಸತಾರಾದ ಸೋದರಿ ಕಾಳೆ.

ಈ ಉತ್ಸವದ ಪರಿಣಾಮವನ್ನು ಸೋದರ ಸುಭಾಷ್ ವೈದ್ಯರು ಈ ಶಬ್ದಗಳಲ್ಲಿ ಸೂಕ್ತವಾಗಿ ವಿವರಿಸಿದ್ದಾರೆ– ನಮ್ಮ ಪ್ರೀತಿಯ ಗುರುಗಳಿಂದ ನಾವು ಸ್ವೀಕರಿಸಿದ ಯಾವುದನ್ನೇ ಆಗಲಿ, ನಾವು ಮುಕ್ತ ಹೃದಯದಿಂದ ಎಲ್ಲರಿಗೂ ಹಂಚಿಬಿಡಬೇಕು; ಇದರಿಂದ ಗುರುಕೃಪೆಯು ಸದಾ ನಮ್ಮ ಮೇಲಿರುವುದು.

ಶ್ರೀ ರಾಮಚಂದ್ರ ಮಿಷನ್
ಎಖೋಸ್ ಇಂಡಿಯ

ವಲಯ ಸುತ್ತುವರಿ

ಮಾರ್ಚ್ 2009 ಆಂತರಿಕ ಪ್ರಸಾರಕ್ಕಾಗಿ ಮಾತ್ರ ಸಂಪುಟ 2 ಸಂಚಿಕೆ 2





## ಧ್ಯಾನಮಂದಿರದ ಉದ್ಘಾಟನೆ ವಲ್ಸಾಡ್, ಗುಜರಾತ್

ಪೂಜ್ಯ ಲಾಲಾಜಿ ಮಹಾರಾಜರ ಜನ್ಮದಿನೋತ್ಸವದ ಅಂಗವಾಗಿ ಸಹೋದರ ಸಿ. ರಾಜಗೋಪಾಲನ್‌ರವರು ವಲ್ಸಾಡ್ ನ ಧ್ಯಾನಮಂದಿರವನ್ನು ಉದ್ಘಾಟಿಸಿದರು. ಆಶ್ರಮದಲ್ಲಿ ಭಾನುವಾರದ ಸತ್ಸಂಗಗಳು ಶುರುವಾಗಲು ಇದು ನಾಂದಿಯಾಯಿತು. ದಕ್ಷಿಣ ಗುಜರಾತ್ ನ ಅನೇಕ ಕೇಂದ್ರಗಳಿಂದ ಸುಮಾರು 300 ಅಭ್ಯಾಸಿಗಳು ಲಾಲಾಜಿ ಮಹಾರಾಜರ ವಿಡಿಯೋ ಅಭ್ಯಾಸಿ ಸೋದರರ ಉಪನ್ಯಾಸಗಳು ಮತ್ತು ಪ್ರಶಿಕ್ಷಕರ ಗೋಷ್ಠಿಯನ್ನೊಳಗೊಂಡ ಈ ಸಮಾರಂಭದಲ್ಲಿ ಪಾಲ್ಗೊಂಡರು.

ಈ ಆಶ್ರಮವು ವಲ್ಸಾಡ್–ಧರಮ್‌ಪುರ್ ರಾಜ್ಯ ಹೆದ್ದಾರಿಯ ಬಳಿ ಒಂದೂವರೆ ಎಕರೆ ಜಾಗದಲ್ಲಿ ಹರಡಿದೆ ಹಾಗೂ ಇದು ಮುಂಬೈ–ದೆಹಲಿಯನ್ನು ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿ ನಂ.8 ರಿಂದ 4 ಕಿ.ಮೀ. ದೂರದಲ್ಲಿದೆ. ಧ್ಯಾನಮಂದಿರವು 250 ಅಭ್ಯಾಸಿಗಳಿಗಾಗಿ ಸ್ಥಳ ಒದಗಿಸುತ್ತದೆ. ಆಶ್ರಮದಲ್ಲಿ ಚಿಣ್ಣರಿಗಾಗಿ ಪ್ರತ್ಯೇಕ ಸ್ಥಳವೂ, ಸಂಗ್ರಹ ಮತ್ತು ಭದ್ರತಾ ಕೊಠಡಿಗಳನ್ನೊಳಗೊಂಡ ಶೌಚಾಲಯ ಕಟ್ಟಡಗಳೂ ಇವೆ.

ವಲ್ಸಾಡ್‌ನಲ್ಲಿಯ ಉದ್ಘಾಟನಾ ಸಮಾರಂಭಕ್ಕೂ ಮುಂಚೆ ಸತ್ಸಂಗಗಳನ್ನು ನೆರೆಯ ಸೂರತ್, ನವ್ಸಾರಿ ಹಾಗೂ ವಾಪಿಯಲ್ಲಿ ನಡೆಸಲಾಗುತ್ತಿತ್ತು. ಸತ್ಸಂಗದ ನಂತರ ಉಪನ್ಯಾಸಗಳು ಮತ್ತು ಪ್ರಶ್ನೋತ್ತರ ಕಾರ್ಯಕ್ರಮಗಳನ್ನು ನಡೆಸಲಾಯಿತು.

## ಪ್ರಶಿಕ್ಷಕರ ತರಬೇತಿ ಕಾರ್ಯಕ್ರಮ ( ತಂಡ–1)

ದಕ್ಷಿಣ ತಮಿಳುನಾಡು, 2ಬಿ ವಲಯಗಳ ಪ್ರಶಿಕ್ಷಕರ ಮೊದಲ ತಂಡಕ್ಕಾಗಿ ಕಾರ್ಯಕ್ರಮವನ್ನು ಮಲಂಪುರಾ ರಿಟ್ರೀಟ್ ಕೇಂದ್ರದಲ್ಲಿ ನಡೆಸಲಾಯಿತು. 46 ಪ್ರಶಿಕ್ಷಕರು ಪಾಲ್ಗೊಂಡಿದ್ದರು.

ಆಧ್ಯಾತ್ಮಿಕ ತರಬೇತುದಾರರಿಗಾಗಿ ಅವಶ್ಯಕ ಅಂಶಗಳು, ಪ್ರಶಿಕ್ಷಕರ ಕೆಲಸ ಮತ್ತು ಸಾಂಘಿಕ ಕಾರ್ಯ ಹಾಗೂ ಸಾಮರಸ್ಯ ಮೊದಲಾದ ವಿಷಯಗಳು ಚರ್ಚಿತವಾದವು. ಇವುಗಳನ್ನು ಪೂರ್ಣ ತಯಾರಿಯೊಂದಿಗೆ ಅತ್ಯಂತ ಲಕ್ಷ್ಯ, ಆಸಕ್ತಿ ಹಾಗೂ ಪ್ರೀತಿಯಿಂದ ಪ್ರಸ್ತುತ ಪಡಿಸಲಾಯಿತು. ಶುದ್ಧ ಮನಸ್ಕರು ಮತ್ತು ಶೀಘ್ರಗ್ರಾಹಿಗಳಾದ ಪ್ರಶಿಕ್ಷಕರಿದ್ದ ಕಾರಣದಿಂದ ಸಭೆಯು ಪರಿಣಾಮಕಾರಿಯಾಯಿತೆಂದು ಎಲ್ಲರೂ ಅಭಿಪ್ರಾಯ ಪಟ್ಟರು.

ಮಲಂಪುರಾ ರಿಟ್ರೀಟ್‌ನ ವಾತಾವರಣ ಮತ್ತು ಸೌಕರ್ಯಗಳು ತುಂಬಾ ವಿಶೇಷವಾಗಿದ್ದು ಇಂತಹ ಕಾರ್ಯಕ್ರಮಗಳಿಗಾಗಿಯೇ ಕಲ್ಪಿಸಲಾಗಿದೆ.

ಸಾಕಷ್ಟು ಊಟ ಮತ್ತು ಚಹಾ ವಿರಾಮಗಳೊಂದಿಗೆ ತರಬೇತು ಕಾರ್ಯಕ್ರಮವು ಸುಮಾರು 10 ಘಂಟೆಗಳ ಕಾಲ ನಡೆಯಿತು.

ಈ ಎರಡು ದಿನಗಳಲ್ಲಿ ನಡೆದ ಕಾರ್ಯಕಲಾಪಗಳು ಗುರುಗಳ ಪ್ರೇಮ, ಅರ್ಪಣೆ ಮತ್ತು ಸಾನ್ನಿಧ್ಯದಿಂದಲೇ ಸಾಧ್ಯವಾದುದರಿಂದ ಎಲ್ಲರೂ ಗುರುಗಳ ಮೇಲೆ ಕೃತಜ್ಞತಾ ಭಾವವನ್ನು ಹೊಂದಿದರು.

## ಕೇರಳದಲ್ಲಿ ಪ್ರಶಿಕ್ಷಕರ ಸಭೆ–ಅಲುವಾ

ಜನವರಿ 31ರಿಂದ ಫೆಬ್ರುವರಿ 1, 2009 ರವರೆಗೆ ಆಲುವಾದಲ್ಲಿ ಪೂರ್ಣ ಕೇರಳ ಪ್ರಶಿಕ್ಷಕರ ಸಭೆಯನ್ನು ನಡೆಸಲಾಯಿತು. ವಲಯಾಧಿಕಾರಿ ಸಹೋದರ ಕೆ.ಯು.ಮೋಹನ್‌ರವರು ಈ ಸಭೆಯನ್ನು ನಡೆಸಿಕೊಟ್ಟರು. ಈ ಕಾರ್ಯಕ್ರಮದ ಉದ್ದೇಶವು ಚೆನ್ನೈನಲ್ಲಿ ನಡೆದ ವಲಯ ಮುಖ್ಯಸ್ಥರು ಮತ್ತು ಕೇಂದ್ರ ಮುಖ್ಯಸ್ಥರ ಸಭೆಯಲ್ಲಿ ಚರ್ಚಿತಗೊಂಡ ಮಹತ್ವಕಾರಿ ಅಂಶಗಳನ್ನು ಹಂಚಿಕೊಳ್ಳುವುದಾಗಿತ್ತು. ಚೆನ್ನೈನಲ್ಲಿ ನಡೆದ ಸಭೆಯ ಮಾದರಿಯನ್ನೇ ಈ ಸಭೆಯಲ್ಲೂ ಅನುಸರಿಸಲಾಯಿತು. ಕೇಂದ್ರಮುಖ್ಯಸ್ಥರ ಜವಾಬ್ದಾರಿಗಳು, ನಡತೆಯ ರಚನೆ, ಆಶ್ರಮಗಳು, ಆಶ್ರಮದ ಮದುವೆಗಳು, ಪುಸ್ತಕ ಮಾರಾಟ ಮತ್ತು ಪ್ರಕಾಶನ, ಭದ್ರತೆ, ಲೆಕ್ಕಪತ್ರ ಮುಂತಾದ ಹನ್ನೊಂದು ವಿಷಯಗಳ ಬಗ್ಗೆ ನಿರ್ವಾಹಕರು ಉಪನ್ಯಾಸಗಳನ್ನು ನೀಡಿದರು. ಮಿಶನ್ನಿನ ಕೆಲಸಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವವರ ಜ್ಞಾನಾಭಿವೃದ್ಧಿಗಾಗಿ ಇದು ಪರಿಣಾಮಕಾರಿಯಾಯಿತು ಹಾಗೂ ಅವರ ಕೆಲಸಗಳಿಗೊಂದು ದಾರಿದೀಪವಾಯಿತು.

## ಉತ್ತರಕರ್ನಾಟಕದಲ್ಲಿ ಪ್ರಶಿಕ್ಷಕರ ಸಭೆ



25 ಡಿಸೆಂಬರ್ 2008ರಂದು ಗುಲಬರ್ಗಾ ಆಶ್ರಮದಲ್ಲಿ ಉತ್ತರಕರ್ನಾಟಕ ವಲಯದ ಪ್ರಶಿಕ್ಷಕರಿಗಾಗಿ ಸಭೆಯನ್ನು ಆಯೋಜಿಸಲಾಗಿತ್ತು. 30 ಪ್ರಶಿಕ್ಷಕರು ಹಾಜರಿದ್ದರು. ವಲಯ ಮುಖ್ಯಸ್ಥರಾದ ಸಹೋದರ ರಾಜು ಕಾಶಂಪೂರ್ಕರ್‌ರವರ ಉಪನ್ಯಾಸವನ್ನು ಈ ಕಾರ್ಯಕ್ರಮವು ಒಳಗೊಂಡಿತ್ತು. ದಿನದ ಇತರ ಚಟುವಟಿಕೆಗಳಲ್ಲಿ ಕೆಲಸಕಾರ್ಯಗಳು, ಗುಂಪು ಚರ್ಚೆಗಳು, ಪ್ರಶ್ನೋತ್ತರ ಕಾರ್ಯಕ್ರಮಗಳ ನಂತರ ಮುಕ್ತಸಭೆಗಳ ಆಯೋಜನೆ, ಅಭ್ಯಾಸಿ ತರಬೇತು ಕಾರ್ಯಕ್ರಮ, ಪೂರ್ಣ ದಿನದ ಕಾರ್ಯಕ್ರಮಗಳ ಆಯೋಜನೆ ಮತ್ತುಸಮೀಪದ ಕೇಂದ್ರಗಳ ಬೈಠಕುಗಳ ಪಟ್ಟಿ ಹಾಗೂ ವರದಿ ಮುಂತಾದ ವಿಷಯಗಳ ಬಗ್ಗೆ ಚರ್ಚೆ ನಡೆಯಿತು. ಪ್ರಶಿಕ್ಷಕರ ಕಾರ್ಯಗಳ ಬಗೆಗಿನ ಮುಖ್ಯ ಅಂಶಗಳನ್ನೊಳಗೊಂಡ ಗುರುಗಳ ಧ್ವನಿಮುದ್ರಣವನ್ನು ಸಾಯಂಕಾಲ ಕೇಳಿಸಿದ ನಂತರ ಸತ್ಸಂಗವನ್ನು ನಡೆಸಲಾಯಿತು. ಎಲ್ಲಾ ಪ್ರಶಿಕ್ಷಕರಿಗೂ ಇದು ಉಪಯೋಗಕಾರಿ ಎನ್ನಿಸಿ ಪ್ರತೀ ಆರು ತಿಂಗಳಿಗೊಮ್ಮೆ ಇಂತಹ ಸಭೆಗಳನ್ನು ನಡೆಸಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿದರು.



"ಒಬ್ಬ ವ್ಯಕ್ತಿ ಹಾಗೂ ಅವನೊಳಗಿನ ದೇವರ ಮಧ್ಯದ ಒಂದೇ ತಡೆಯೆಂದರೆ ಅದು E-G-O (ಅಹಂ). ಎಂದು ಅಹಂ ಅನ್ನು ಬಿಡಲಾಗುತ್ತದೆಯೋ, ಬಿಸಾಡಲಾಗುತ್ತದೆಯೋ, ಸಮರ್ಪಿಸಲಾಗುತ್ತದೆಯೋ ಆಗ ಅದರ ಜಾಗದಲ್ಲಿ G-O-D (ದೇವರು) ಇರುವನು."
– ಚಾರಿಜೀ

## ನಡತೆಯ ರಚನೆಯ ಬಗ್ಗೆ ಅಭ್ಯಾಸಿ ತರಬೇತು ಕಾರ್ಯಕ್ರಮ



ಅಸ್ಸಾಮ್‌ನ ದಿಗ್‌ಬೋಯಿ ಕೇಂದ್ರದಲ್ಲಿ ಜನವರಿ 4ರಂದು ಒಂದು ದಿನದ ಅಭ್ಯಾಸಿ ತರಬೇತು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಸಮೀಪದ ಅಸ್ಸಾಂ ಮತ್ತು ಅರುಣಾಚಲ ಪ್ರದೇಶದ ಕೇಂದ್ರಗಳಾದ ತೀನ್‌ಸುಖಿಯಾ, ತೇಜ್‌ಪುರ್, ಜೋರ್ಹಾತ್, ಸಿಬ್‌ಸಾಗರ್, ದುಲಿಯಾಜನ್, ನಹರ್‌ಕಟಿಯಾ, ದಿಬ್ರೂಗಢ್, ದೂಮ್‌ದೂಮಾದಿಂದ ಸುಮಾರು 300 ಅಭ್ಯಾಸಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಪೂಜ್ಯ ಗುರುಗಳ ಇತ್ತೀಚಿನ ಉಪನ್ಯಾಸಗಳನ್ನು ಗಮನದಲ್ಲಿಟ್ಟುಕೊಂಡು ನಡತೆಯ ರಚನೆಯ ಬಗ್ಗೆ ವಿಷಯವನ್ನು ಕೇಂದ್ರೀಕರಿಸಲಾಯಿತು. ಗುವಾಹಾಟಿಯ ಸಹೋದರ ಅಶೋಕ್ ಸೇನ್‌ಗುಪ್ತಾರವರು ಲಾಲಾಜಿಯವರ ಮಾತುಗಳನ್ನು ಹೇಳುತ್ತಾ ಆಧ್ಯಾತ್ಮದಲ್ಲಿ ಒಬ್ಬ ವ್ಯಕ್ತಿ ಎಷ್ಟೇ ಎತ್ತರದಲ್ಲಿ ಏರಿರಲಿ, ಅವನು ನೀತಿರಹಿತನಾಗಿದ್ದಲ್ಲಿ, ಆಧ್ಯಾತ್ಮದ ಉಸಿರೂ ಕೂಡ ಅವನನ್ನು ಮುಟ್ಟಿರಲಾರದು ಎಂಬುದನ್ನು ಪ್ರಸ್ತುತ ಪಡಿಸಿದರು. 'ಗುರುಗಳು ನಮ್ಮ ಆಧ್ಯಾತ್ಮಿಕ ಪ್ರಗತಿಗೆ ಹೊಣೆಗಾರರು, ಆದರೆ ನಮ್ಮ ನಡತೆ ಮತ್ತು ಮನೋವೃತ್ತಿಯ ಬದಲಾವಣೆಗೆ ನಾವೇ ಹೊಣೆಗಾರರು' ಎಂಬುದೂ ಹಾಗೂ ನಮ್ಮಲ್ಲಿ ಬದಲಾವಣೆ ಕಾಣಲು 'ಮೊದಲು ನಾವು ಸ್ವತಃ ನಮಗೆ ನಾವು ಪ್ರಾಮಾಣಿಕರಾಗಿರಬೇಕು' ಎಂಬ ಬಾಬೂಜಿಯವರ ಮಾತಿಗೂ ಒತ್ತು ನೀಡಲಾಯಿತು. ಪ್ರಸ್ತುತಿಯ ನಂತರ ಯುವಜನರಿಂದ ನಡೆಸಲ್ಪಟ್ಟ ಪ್ರಶ್ನೋತ್ತರ ಭಾಗವು ಶ್ರೋತೃಗಳಿಗೆ ತಾವು ಸ್ವತಃ ವಚನಬದ್ಧರಾಗಿರಲು ಸ್ಫೂರ್ತಿ ನೀಡಿತು.

## ಭದ್ರಾವತಿ, ಕರ್ನಾಟಕ

ಎಂ. ವಿಶ್ವೇಶ್ವರಯ್ಯರವರಿಂದ 1922 ನ ಸ್ವಾತಂತ್ರ್ಯ ಪೂರ್ವ ದಿನಗಳಲ್ಲಿ ಶುರುವಾದ ಭಾರತದ ಮೊದಲ ಉಕ್ಕಿನ ಕಾರ್ಖಾನೆಯ ನಗರ ಭದ್ರಾವತಿಯಲ್ಲಿ ಫೆಬ್ರುವರಿ 2 ರಂದು ಮಿಶನ್ನಿನ ಈ ವರ್ಷದ ಮೊದಲ ಕಾರ್ಯಕ್ರಮ ನಡೆಯಿತು.

ಆಗಸ್ಟ್ 2008ರಲ್ಲಿ 3 ಅಭ್ಯಾಸಿಗಳಿಂದ ಶುರುವಾದ ಈ ಕೇಂದ್ರವು ಗುರುಗಳ ಕೃಪೆಯಿಂದ, ಸ್ಥಳೀಯ ಅಭ್ಯಾಸಿಗಳು, ಸ್ವಯಂಸೇವಕರು ಮತ್ತು ಸತತ ಭೇಟಿ ನೀಡುವ ಶಿವಮೊಗ್ಗ, ತಿಪಟೂರು ಹಾಗೂ ಬೆಂಗಳೂರಿನ ಪ್ರಶಿಕ್ಷಕರ ಉತ್ಸುಕತೆಯಿಂದ ಇಂದು 30 ಅಭ್ಯಾಸಿಗಳನ್ನು ಹೊಂದಿದೆ.

ಉತ್ಸವವನ್ನು ಸ್ಥಳೀಯ ಅಭ್ಯಾಸಿಗಳು ಭೋಜನ ವ್ಯವಸ್ಥೆಯೊಂದಿಗೆ ಸಹೋದರಿ ನಾಗಮಣಿಯವರ ಮನೆಯಲ್ಲಿ ನಡೆಸಿದರು. ಲಾಲಾಜಿ ಮಹಾರಾಜರ ವೀಡಿಯೋ ತೋರಿಸುವುದರೊಂದಿಗೆ ಸಾಧನೆಯ ಬಗ್ಗೆ ಚರ್ಚೆ ಮತ್ತು ಗುರುಗಳ ಉಕ್ತಿಯ ಮೂಕಾಭಿನಯ ಇವುಗಳನ್ನು ಒಳಗೊಂಡ ಪೂರ್ಣದಿನದ ಕಾರ್ಯಕ್ರಮವನ್ನು ಬೆಂಗಳೂರಿನ ಸಹೋದರಿ ರೂಪಾ ಮತ್ತು ಸಹೋದರ ಪ್ರಮೋದ್ ನಡೆಸಿಕೊಟ್ಟು ಭಾಗಿಗಳಾದ ಅಭ್ಯಾಸಿಗಳು ದಿನ ಪೂರ್ತಿ ಉಳಿದುಕೊಳ್ಳುವಂತೆ ಮಾಡಿದರು.

ಯುವ ಸ್ವಯಂಸೇವಕರ ಉತ್ಸಾಹ ಮತ್ತು ಈ ಹೊಸ ಕೇಂದ್ರದ ಅಭ್ಯಾಸಿಗಳು ಕೂಡಲೇ ಆಶ್ರಮದ ಸಮಾರಂಭವನ್ನು ಆಯೋಜಿಸಲು ತೋರಿದ ಪ್ರೇರೇಪಣೆಯು ಆನಂದದಾಯಕವಾಗಿತ್ತು.

## ಯುವಸಮ್ಮೇಳನ – ಭವಿಷ್ಯದ ಸಿದ್ಧತೆ



ಬೆಂಗಳೂರಿನಲ್ಲಿ 24ರಿಂದ 26 ಜನವರಿಯವರೆಗೆ 3 ದಿನದ ವಸತಿಯೊಂದಿಗೆ ಯುವಸಮ್ಮೇಳನವನ್ನು 'ಭವಿಷ್ಯದ ಸಿದ್ಧತೆ' ಎಂಬ ವಿಷಯದ ಮೇಲೆ ನಡೆಸಲಾಯಿತು. 18–35 ವಯೋಮಾನದ ಸುಮಾರು 25 ಅಭ್ಯಾಸಿಗಳು ಪಾಲ್ಗೊಂಡಿದ್ದರು. ಸತ್ಸಂಗದೊಂದಿಗೆ ಶುರುವಾಗುತ್ತಿದ್ದ ದಿನವು ಆಯ್ದ ವಿಷಯಗಳ ಮೇಲಿನ ಉಪನ್ಯಾಸಗಳು, ಚರ್ಚೆಗಳೊಂದಿಗೆ ಮುಂದುವರೆದು ಸಂಜೆ ಸ್ವಯಂಸೇವೆಯಿಂದ ಮುಕ್ತಾಯವಾಗುತ್ತಿತ್ತು. ಮೊದಲ ದಿನದಂದು ಗುಣಾಭಿವೃದ್ಧಿ, ಸಾಂಘಿಕ ಕಾರ್ಯ, ಸಹೋದರತ್ವ ಮತ್ತು ಸಹಜಮಾರ್ಗದ ಮೂಲತತ್ವಗಳನ್ನು ಕೇಂದ್ರೀಕರಿಸಲಾಯಿತು. ಎಲ್ಲಾ ಅಭ್ಯಾಸಿಗಳೂ ಈ ಸಂದೇಶವನ್ನು ಅಂತರಾಳದಿಂದ ಅನುಭವಿಸಿದರು.

ಎರಡನೇ ದಿನದಂದು ಮಿಶನ್ನಿನ ಅನೇಕ ಚಟುವಟಿಕೆಗಳ ಮೇಲೆ ಗಮನ ಹರಿಸಲಾಯಿತು. ನಂತರ ಅಭ್ಯಾಸಿಗಳು ತಮ್ಮ ಆಯ್ಕೆಯ ಕೆಲಸದಲ್ಲಿ ಶ್ರದ್ಧೆಯಿಂದ ತೊಡಗಿಸಿಕೊಂಡರು.

ಮೂರನೇ ದಿನ ಅಭ್ಯಾಸಿಗಳು ತಮ್ಮ ಅನುಭವಗಳನ್ನು ಹಂಚಿಕೊಂಡರು ಹಾಗೂ ಅವರ ಜೀವನದಲ್ಲಿ ಗುರುಗಳ ಪ್ರಭಾವದ ಬಗ್ಗೆ ಎಲ್ಲರಲ್ಲೂ ಒಮ್ಮತ ಕಂಡುಬಂದಿತು. ಸಭೆಯು ಕಿರುನಾಟಕಗಳು, ತಂಡ ರಚನೆಯ ಆಟಗಳು, ಮತ್ತು ಸಂಜೆಯಂದು ಆಧ್ಯಾತ್ಮಿಕ ಉಪಯುಕ್ತತೆಯ ಕೆಲ ವಿಶೇಷ ಚಲನಚಿತ್ರಗಳನ್ನೂ ಒಳಗೊಂಡಿತ್ತು. ತಮ್ಮ ಸಾಮರ್ಥ್ಯವನ್ನು ಸರಿಯಾದ ದಿಶೆಯಲ್ಲಿ ಹರಿಯಬಿಡಲು ಸಹಾಯವಾಗಲು ಉತ್ಸಾಹ ಮತ್ತು ಅಭಿರುಚಿಯಿಂದ ಮಿಶನ್ನಿಗಾಗಿ ಶ್ರಮಿಸುವ ಯುವಜನರನ್ನು ತಲುಪಲು ಇದು ಹಾದಿಯಾಯಿತು.

## ಚಂದ್ರಪುರದ ಅಭ್ಯಾಸಿ ತರಬೇತು ಕಾರ್ಯಕ್ರಮ

ಚಂದ್ರಪುರ (ಮಹಾರಾಷ್ಟ್ರ) ಕೇಂದ್ರದಲ್ಲಿ 28 ಡಿಸೆಂಬರ್ 2008ರಂದು ಉತ್ತಮ ಮತ್ತು ಆಸಕ್ತಿಯುತ ಸಾಧನೆಯನ್ನು ಜ್ಞಾಪಿಸಲು ಸಹಾಯವಾಗುವಂತೆ ಹಿಂದಿಯಲ್ಲಿ ಅಭ್ಯಾಸಿ ತರಬೇತು ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಇದರ ಉದ್ದೇಶವು ಸಹಜಮಾರ್ಗ ಸಾಧನೆ ಮತ್ತು ತತ್ವಗಳ ಪ್ರಸ್ತುತಿಯಾಗಿತ್ತು. ಸತ್ಸಂಗದ ನಂತರ ಮುಂಜಾನೆ ಗುರುಗಳ ಹಿಂದಿ ವಿಡಿಯೊ 'ಈಶ್ವರ್ ಸೆ ಸಂಬಂಧ್ ಜೋಡೋ' (ದೇವರೊಂದಿಗೆ ಸಂಬಂಧ ಕಲ್ಪಿಸಿರಿ) ವನ್ನು ತೋರಿಸಲಾಯಿತು. ಮಾನವ ಜೀವನದ ಗುರಿ ಮತ್ತು ಗುರುಗಳ ಪಾತ್ರ, ಪ್ರಾರ್ಥನೆ, ಧ್ಯಾನ, ಶುದ್ಧೀಕರಣ ಹಾಗೂ ದಿನಚರಿ ಬರೆಯುವುದರ ಮಹತ್ವ ಮುಂತಾದ ವಿಷಯಗಳ ಬಗ್ಗೆ ಉಪನ್ಯಾಸಗಳನ್ನು ನೀಡಲಾಯಿತು. ಮಧ್ಯಾಹ್ನದಂದು ಕೆಲ ಉಪನ್ಯಾಸಕಾರರು ಸಹಜ ಮಾರ್ಗ ಸಾಧನೆಯ ಅನೇಕ ಅಂಶಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಪಡಿಸಿದರು. ನಂತರ ಪ್ರತ್ಯೇಕ ಸಾಧನೆಯ ಬಗ್ಗೆ ಆಸಕ್ತಿ ಮತ್ತು ಸರಿಯಾದ ಮಾರ್ಗ ಅನುಸರಿಸುವುದರ ಬಗ್ಗೆ ತಿಳಿದುಕೊಳ್ಳಲು ಪ್ರಶ್ನಾವಳಿಯನ್ನು ಅಭ್ಯಾಸಿಗಳಲ್ಲಿ ಹಂಚಲಾಯಿತು. ಸಾಯಂಕಾಲದ ಸತ್ಸಂಗದೊಂದಿಗೆ ಕಾರ್ಯಕ್ರಮವು ಮುಕ್ತಾಯಗೊಂಡಿತು.







## ಔರಂಗಾಬಾದ್‌ನಲ್ಲಿ ಮಕ್ಕಳ ಕಾರ್ಯಾಗಾರ

18 ಜನವರಿ 2009ರಂದು ಔರಂಗಾಬಾದ್‌ನಲ್ಲಿ ಒಂದು ದಿನದ ಮಕ್ಕಳ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. 5–12 ವಯೋಮಾನದ ಇಪ್ಪತ್ತೆರಡು ಮಕ್ಕಳು ಜೀವನದಲ್ಲಿ ಬದುಕುವ ದಾರಿಯನ್ನು ಕಂಡುಕೊಳ್ಳುವುದರೊಂದಿಗೆ ಜ್ಞಾನ ಮತ್ತು ಮೋಜುಭರಿತ ದಿನವನ್ನು ಕಳೆಯಲು ಸೇರಿದ್ದರು. ಕಾರ್ಯಕ್ರಮವು ಪ್ರಾರ್ಥನೆಯೊಂದಿಗೆ ಪ್ರಾರಂಭಗೊಂಡು ತದನಂತರ ಚಿತ್ರಕಲಾಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಭಿನ್ನರೀತಿಯ ಪಾರಸ್ಪರಿಕ ಚರ್ಚೆಯಲ್ಲಿ ಮಕ್ಕಳು ಪ್ರಕೃತಿಯ ಮೂಲತತ್ವಗಳನ್ನು ಮತ್ತು ಅವುಗಳ ಮಹತ್ವವನ್ನು ಗುರುತಿಸಿ ವಿವರಿಸಿದರು.

ಎಲ್ಲಾ ಮಕ್ಕಳೂ ಬಹುಚೆನ್ನಾಗಿ ಬರೆತದ್ದನ್ನು ನೋಡಲು ಹೃದಯಸ್ಪರ್ಶಿಯಾಗಿತ್ತು. ಭರವಸೆ, ಅವಿರತ ಯತ್ನ ಮತ್ತು ಕೃತಜ್ಞತೆಗಳನ್ನು ತಿಳಿಹೇಳುವ ಕಥೆಗಳನ್ನು ಮಕ್ಕಳಿಗೆ ಹೇಳಲಾಯಿತು.

## ವಿ.ಬಿ.ಎಸ್.ಇ. ಶಿಕ್ಷಕರ ವಿಕಸನ ಮತ್ತು ಪ್ರವರ್ಧಮಾನ ಕಾರ್ಯಕ್ರಮ– ರಾಂಚಿ

ಜನವರಿ 3–4, 2009 ರಂದು ರಾಂಚಿಯಲ್ಲಿ ಎರಡು ದಿನದ ರಾಜ್ಯಮಟ್ಟದ ಕಾರ್ಯಕ್ರಮವನ್ನು ನಡೆಸಲಾಯಿತು. ಈ ಕಾರ್ಯಕ್ರಮದ ಉದ್ದೇಶವು ಜಾರ್ಖಂಡ್‌ನಲ್ಲಿ ವಿ.ಬಿ.ಎಸ್.ಇ. ಚಟುವಟಿಕೆಗಳನ್ನು ಗುರುತಿಸುವುದೇ ಆಗಿತ್ತು. ಕೊಲ್ಕೊತಾದ ಶಿಕ್ಷಕರಾದ ಸಹೋದರ ಅರುಣ್ ದವೆ ಮತ್ತು ಸಹೋದರಿ ಲೀನಾ ದವೆಯವರೊಂದಿಗೆ ವಲಯಮುಖ್ಯಸ್ಥರಾದ ಡಾ. ಜಿ.ಎಮ್.ಭಟ್ನಾಗರ್, ಸಹೋದರ ಅರುಣ್‌ಕುಮಾರ್ ಲಾಲ್ ಹಾಗೂ ಸಹೋದರ ಮನೋಜ್ ತಿವಾರಿಯವರು ನಡೆಸಿಕೊಟ್ಟ ಈ ಕಾರ್ಯಕ್ರಮದಲ್ಲಿ ಸುಮಾರು 59 ಅತಿಥಿಗಳು ಭಾಗವಹಿಸಿದ್ದರು. ಕಾರ್ಯಕ್ರಮದ ನಿರ್ವಾಹಕರು ವಿ.ಬಿ.ಎಸ್.ಇ. ಪಠ್ಯಕ್ರಮವನ್ನು ಹೇಗೆ ರಚಿಸಿ ಪ್ರಸ್ತುತ ಪಡಿಸಬೇಕೆಂಬ ವಿಧಾನದ ಮೇಲೆ ಬೆಳಕು ಚೆಲ್ಲಿದ್ದರಿಂದ ಈ ಚಟುವಟಿಕೆಗಳನ್ನು ಇನ್ನೂ ಕೈಗೆತ್ತಿಕೊಳ್ಳದ ಕೇಂದ್ರಗಳಿಗೆ ಇದರಿಂದ ಸಹಾಯವಾಯಿತು.

ಈ ಕಾರ್ಯಕ್ರಮವು ನಮಗೆಲ್ಲೇ ಅವಕಾಶ ದೊರಕಿದರೂ ಮೌಲ್ಯಗಳ ಕಲ್ಪನೆಯನ್ನು ಹರಡುವುದರ ಕುರಿತು ಇರುವುದೆಂದು ತಿಳಿಸಲಾಯಿತು. ವಿ.ಬಿ.ಎಸ್.ಇ.ಪಠ್ಯಕ್ರಮ ಹಾಗೂ ಅದರೊಂದಿಗಿನ ಚಟುವಟಿಕೆಗಳು ಶಾಲೆಗಳಿಗಾಯೇ ಇದ್ದರೂ ಸಹ ಅದು ಕೇವಲ ಶಾಲೆಗಳಿಗಷ್ಟೇ ಮೀಸಲಾಗಬಾರದು. ಇದು ಅಭ್ಯಾಸಿಯ ಜೀವನದ ಎಲ್ಲಾ ಘಟ್ಟಗಳಲ್ಲಿಯೂ ಹಾಸುಹೊಕ್ಕಾಗಬೇಕು. ಸಹೋದರ ದವೆಯವರು ವಿ.ಬಿ.ಎಸ್.ಇ.ನ ಮುಂದಾಳುಗಳಾದ ಶಿಕ್ಷಕರ ಉತ್ತೇಜನಕ್ಕಾಗಿ ತಮ್ಮ ಅಭಿಪ್ರಾಯ ತಿಳಿಸಿದರು ಹಾಗೂ ನಾವು ಎಲ್ಲರನ್ನೂ ಸಾವಕಾಶವಾಗಿ ಆಧ್ಯಾತ್ಮದ ಕಡೆಗೆ ನಡೆಸಿಕೊಂಡು ಹೋಗಬೇಕೆಂದು ಒತ್ತಿ ಹೇಳಿದರು. ಸಹೋದರಿ ಲೀನಾರವರು ಸಾರ್ವಜನಿಕ ಸ್ಥಳಗಳಲ್ಲಿ ಹೇಗೆ ಮಾತನಾಡುವುದೆಂಬುವುದರ ಬಗೆಗೆ ಕೆಲವು ಸಲಹೆ ಮತ್ತು ಕಿವಿಮಾತುಗಳನ್ನು ಹೇಳಿದರು. ಸಹೋದರ ಮನೋಜ್ ವ್ಯಕ್ತಿತ್ವವಿಕಸನ ಮತ್ತು ಸಮತೋಲಿತ ಜೀವನದ ಬಗ್ಗೆ ಮಾತನಾಡಿದರು. ಭಾಗಿಗಳು ತಮ್ಮ ಇಚ್ಛೆಯ ವಿಷಯದ ಮೇಲೆ ಮಾತನಾಡಿದರು ಹಾಗೆಯೇ ಅವರ ವಿವರಣಾ ಸಾಮರ್ಥ್ಯದ ಬಗ್ಗೆ ಅಭಿಮತವನ್ನು ತಿಳಿಸಲಾಯಿತು.

ಕೇಂದ್ರದ ಭವಿಷ್ಯದ ಕಾರ್ಯಕಲಾಪಗಳನ್ನು ಚರ್ಚಿಸಲು ಒಂದು ಸಭೆಯನ್ನು ಕರೆಯಲಾಗಿತ್ತು. ಅಲ್ಲಿ ಕಥೆಗಳನ್ನು ಮತ್ತು ಪ್ರಯೋಗಗಳನ್ನು ಇನ್ನೂ ಕೊಂಚ ಕಲಾತ್ಮಕವಾಗಿ ಪರಿಚಯಿಸಬಹುದು ಎಂದು ಸಲಹೆ ನೀಡಲಾಯಿತು. ಪ್ರತಿಯೊಂದು ಕೇಂದ್ರಕ್ಕೂ 2 ಸಿ.ಡಿ.ಗಳನ್ನೊಳಗೊಂಡ ಶಿಕ್ಷಕರ ತರಬೇತು ಸಾಮಗ್ರಿಯನ್ನು ಒದಗಿಸಲಾಯಿತು.



## ಒತ್ತಡ ನಿರ್ವಹಣೆ ಮತ್ತು ಸಮತೋಲಿತ ಪ್ರಗತಿ

ಇಂದೋರ್‌ನಿಂದ 200 ಕಿ.ಮೀ. ದೂರದ ಗುರು ದತ್ತಾತ್ರೇಯ ತಾಂತ್ರಿಕ ವಿದ್ಯಾಲಯ (ಜಿ.ಡಿ.ಐ.ಟಿ.), ಇಂದೋರ್ ವಿಶ್ವವಿದ್ಯಾಲಯ ಮತ್ತು ರಾಜ್‌ಗಢ್ ಕೇಂದ್ರವನ್ನೊಳಗೊಂಡಂತೆ ಮಧ್ಯಪ್ರದೇಶದ ಅನೇಕ ಕೇಂದ್ರಗಳಲ್ಲಿ ಮುಕ್ತಸಭೆಯನ್ನು ನಡೆಸಿಕೊಡಲಾಯಿತು. ಸಭೆಯ ವಿಷಯ 'ಒತ್ತಡ ನಿರ್ವಹಣೆ ಮತ್ತು ಸಮತೋಲಿತ ಪ್ರಗತಿ' ಎಂಬುದಾಗಿತ್ತು. ನಮ್ಮ ಅನಿಯಂತ್ರಿತ ಮನಸ್ಸಿನಿಂದ ನಾವು ಒತ್ತಡವನ್ನು ಸೃಷ್ಟಿಸಿಕೊಳ್ಳುತ್ತೇವೆ ಹಾಗೂ ಧ್ಯಾನದಿಂದ ಮನಸ್ಸನ್ನು ನಾವು ನಿಯಂತ್ರಿತಗೊಳಿಸಬಹುದು ಎಂಬುದನ್ನು ತಿಳಿಸಲಾಯಿತು. ನಮ್ಮ ಪೂರ್ವಾಗ್ರಹಗಳು, ಪೂರ್ವ ಕಲ್ಪಿತ ಅಭಿಪ್ರಾಯಗಳು ನಮ್ಮನ್ನು ಸರಿಯಾದ ಕಾರ್ಯ ನಡೆಸಲಾರದಂತೆ ತಡೆಯುತ್ತವೆ. ಆಧ್ಯಾತ್ಮವು ಆಂತರಿಕ ಮತ್ತು ಬಾಹ್ಯ ಬೇಡಿಕೆಗಳ ನಡುವಿನ ಸಮತೋಲನವನ್ನು ಕಲ್ಪಿಸಲು ಸಹಾಯ ಮಾಡುತ್ತದೆ.

ಸಹಜಮಾರ್ಗದ ಪರಿಚಯವನ್ನು ಪ್ರೇಕ್ಷಕರಿಗೆ ಮಾಡಿಕೊಡಲಾಯಿತು. ಜಿ.ಡಿ.ಐ.ಟಿ.ಯಲ್ಲಿ 200 ವಿದ್ಯಾರ್ಥಿಗಳು ಮತ್ತು 30 ಉಪನ್ಯಾಸಕರು ಹಾಜರಿದ್ದರು. ರಾಜ್‌ಗಢದಲ್ಲಿ ಅಭ್ಯಾಸಿಗಳು ಸಮೀಪದ ಕೇಂದ್ರಗಳಾದ ಖಿಲ್ಚಿಪುರ್, ಕುರಾಬರ್ ಮತ್ತು ಬಯೋರಗಳ ಸಹಯೋಗದೊಂದಿಗೆ ಸಭೆಯನ್ನು ಆಯೋಜಿಸಿದ್ದರು. ಸುಮಾರು 125 ಜನ ಭಾಗವಹಿಸಿದ್ದರು ಹಾಗೂ 35 ಜನ ಸಾಧನೆಯನ್ನು ಪ್ರಾರಂಭಿಸಿದರು. ಮೊರೆನಾದ ಇನ್ನೊಂದು ಮುಕ್ತ ಸಭೆಯಲ್ಲಿ 83 ಜನ ಭಾಗವಹಿಸಿದ್ದರು ಮತ್ತು 33 ಜನ ಸಾಧನೆಯನ್ನು ಪ್ರಾರಂಭಿಸಲು ಇಚ್ಛಿಸಿದರು.

## ಸೋಲಾಪುರ್‌ನ ತಾಂತ್ರಿಕ ವಿದ್ಯಾಲಯದ ವಿದ್ಯಾರ್ಥಿಗಳಿಗೆ ಸಹಜಮಾರ್ಗದ ಪರಿಚಯ

ಜನವರಿ 18,19 ರಂದು ಸೋಲಾಪುರ್(ಮಹಾರಾಷ್ಟ್ರ)ನ ಸರಕಾರೀ ವೈದ್ಯಕೀಯ ಮಹಾವಿದ್ಯಾಲಯದ ಅಭ್ಯಾಸಿ ವಿದ್ಯಾರ್ಥಿಗಳು ಬಿ.ಐ.ಜಿ. ತಾಂತ್ರಿಕ ವಿದ್ಯಾಲಯದ ವಿದ್ಯಾರ್ಥಿಗಳಿಗೆ ಸಹಜಮಾರ್ಗದ ಪರಿಚಯ ಮಾಡಿಕೊಟ್ಟರು. ಸುಮಾರು 300 ವಿದ್ಯಾರ್ಥಿಗಳು ಪ್ರತಿ ಸಭೆಯಲ್ಲಿ ಹಾಜರಿದ್ದರು. ಸಹಜಮಾರ್ಗದ ನಮ್ಮ ಯುವಜನರು ಧ್ಯಾನದ ಅಗತ್ಯ ಮತ್ತು ಉಪಯೋಗ ಹಾಗೂ ಸಹಜಮಾರ್ಗ ಧ್ಯಾನಪದ್ಧತಿಯ ಬಗ್ಗೆ ಅತ್ಯಂತ ಪರಿಣಾಮಕಾರಿಯಾಗಿ ಮಾತನಾಡಿದರು. ಅದೇ ವಯೋಮಾನದ ಗುಂಪು ತಮ್ಮ ಸ್ವಂತ ಅನುಭವ ಮತ್ತು ನಿರ್ಣಯದಿಂದ ಹೇಳುವಾಗ ವಿದ್ಯಾರ್ಥಿ ವೃಂದದ ಸ್ವೀಕಾರವನ್ನು ನಾವು ಕಾಣಬಹುದಾಗಿತ್ತು. ಉಪನ್ಯಾಸಗಳ ನಂತರ ಪ್ರಶ್ನೋತ್ತರ ಕಾರ್ಯಕ್ರಮ ನಡೆಸಲಾಯಿತು ಹಾಗೂ ಸರಿ ಸುಮಾರು 126 ವಿದ್ಯಾರ್ಥಿಗಳು ಸಾಧನೆಯ ಬಗ್ಗೆ ಆಸಕ್ತಿ ತೋರಿದರು. ಅವರಿಗೆ ಕಿರುಪುಸ್ತಿಕೆಗಳನ್ನೂ ನೀಡಲಾಯಿತು; ಹಾಗೂ ಬೈಠಕುಗಳನ್ನು ತೆಗೆದುಕೊಳ್ಳಬಯಸಿದವರಿಗೆ ವಿದ್ಯಾಲಯದ ಆಡಳಿತ ಸಮಿತಿಯ ಒಪ್ಪಿಗೆಯೊಂದಿಗೆ ಹಾಸ್ಟಲ್‌ನ ಆವರಣದಲ್ಲಿ ವ್ಯವಸ್ಥೆ ಮಾಡಲಾಯಿತು. ಈ ಅತ್ಯಂತ ಉತ್ತೇಜನಕಾರಿಯಾದ ಪ್ರತಿಕ್ರಿಯೆಯು ಸೋಲಾಪುರದ ಇನ್ನೊಂದು ವಿದ್ಯಾಲಯ, ಬಿ.ಎಮ್.ತಾಂತ್ರಿಕ ಮಹಾವಿದ್ಯಾಲಯವನ್ನು ಸಂಪರ್ಕಿಸಿ ಅವರ ಅಪ್ಪಣೆ ಪಡೆಯಲು ಸಹಕಾರಿಯಾಯಿತು. ಸ್ವಯಂಸೇವಕರು 'ಕೆಲಸದ ಪ್ರತಿಫಲವೆಂದರೆ ಇನ್ನೂ ಹೆಚ್ಚು ಕೆಲಸ' ಎಂಬುದನ್ನು ಪೂಜ್ಯ ಗುರುಗಳಿಗೆ ಕೃತಜ್ಞರಾಗಿ ಸ್ವೀಕರಿಸಿದರು.

ಶ್ರೀ ರಾಮಚಂದ್ರ ಮಿಷನ್
ಎಖೋಸ್ ಇಂಡಿಯ
ವಲಯ ಸುತ್ತುವರಿ
ಮಾರ್ಚ್ 2009 ಆಂತರಿಕ ಪ್ರಸಾರಕ್ಕಾಗಿ ಮಾತ್ರ ಸಂಪುಟ 2 ಸಂಚಿಕೆ 2

## ಅಭ್ಯಾಸಿಗಳೊಂದಿಗೆ ಜೋಡಣೆ



ಚೆನ್ನೈ ನಗರದಲ್ಲಿ ಸುಮಾರು 8500 ಜನ ಅಭ್ಯಾಸಿಗಳಿದ್ದು, ಮಣಪಾಕ್ಕಮ್ ಆಶ್ರಮದಲ್ಲಿ ನಡೆಯುವ ರವಿವಾರದ ಸತ್ಸಂಗದಲ್ಲಿನ ಸ್ಥಳೀಯ ಅಭ್ಯಾಸಿಗಳ ಉಪಸ್ಥಿತಿ ಸುಮಾರು 2500 ವರೆಗೆ ಇರುತ್ತದೆ.

ಚೆನ್ನೈಯಲ್ಲಿಯ ಕ್ರೊಂಪೇಟ ಎಂಬ ಉಪಕೇಂದ್ರದಲ್ಲಿ ದಿನಾಂಕ ಡಿಸೆಂಬರ 28 ರಂದು ಒಂದು ಕಾರ್ಯಕ್ರಮವನ್ನು ನೆರವೇರಿಸಲಾಯಿತು. ಸುಮಾರು 120 ಅಭ್ಯಾಸಿಗಳು ಈ ಪ್ರಸಂಗದಲ್ಲಿ ಪಾಲ್ಗೊಂಡರು. ಇದು ಕಾರ್ಯಕ್ರಮದ ಮೊದಲು ಎಲ್ಲಾ ನೊಂದಾಯಿತ ಅಭ್ಯಾಸಿಗಳನ್ನು ಆಮಂತ್ರಿಸುವಲ್ಲಿ ಮಾಡಿದ ಪ್ರಯತ್ನಗಳ ಸೂಚಕವಾಗಿತ್ತು. ಅಲ್ಲಿ ಆದ ಎರಡು ಚಿಕ್ಕ ಭಾಷಣಗಳಲ್ಲಿ, ಮೊದಲನೆಯದಾಗಿ, ಸ್ಥಳೀಯ ಪ್ರಶಿಕ್ಷಕರೊಬ್ಬರು ಸಾಧನೆಯಬಗ್ಗೆ ತಿಳಿಸಿದರು. ಎರಡನೆಯದಾಗಿ ಅಭ್ಯಾಸಿಯೊಬ್ಬರು ಸಹಜಮಾರ್ಗದಲ್ಲಿಯ ತಮ್ಮ ಅನುಭವಗಳನ್ನು ಹೇಳುತ್ತ ತಮಗೆ ಈ ಸಾಧನೆಯಿಂದ ಯಾವರೀತಿಯಲ್ಲಿ ಲಾಭವಾಯಿತೆಂಬುದನ್ನು ವಿವರಿಸಿದರು. ಅನಂತರ ಪ್ರಶ್ನೋತ್ತರಗಳ ಸತ್ರ ನೆರವೇರಿತು. ಇದು ಅಭ್ಯಾಸಿಗಳ ಮನಸ್ಸಿನಲ್ಲಿಯ ಶಂಕೆಗಳ ನಿವಾರಣೆಯಾಗಲೂ,ಸಾಧನೆಯ ಸ್ಪಷ್ಟ ಕಲ್ಪನೆ ಬರಲೂ ಹಾಗು ಸಾಧನೆಯಿಂದ ಲಾಭಪಡೆಯುಲು ಸಾತತ್ತ್ಯದ ಅವಶ್ಯಕತೆಯನ್ನು ಧೃಡೀಕರಿಸಲು ಒಂದು ಸೋಪಾನದಂತಾಯಿತು. ಈ ಎರಡು ಗಂಟೆಗಳ ಕಾರ್ಯಕ್ರಮ ಸತ್ಸಂಗದೊಂದಿಗೆ ಮುಕ್ತಾಯವಾಯಿತು.

ಪೂಜ್ಯ ಗುರುಗಳು, "ಮಾರಾಟದ ನಂತರದ ಸೇವೆ" ಯು ಮನೋಭಾವವನ್ನಿಟ್ಟುಕೊಂಡಿರಬೇಕೆಂದು ಪದೇ ಪದೇ ಒತ್ತಿ ಹೇಳಿದ್ದಾರೆ. ಪ್ರತಿಯೊಬ್ಬ ಅಭ್ಯಾಸಿಯು ತನ್ನಲ್ಲಿರುವ ಹಾಗೂ ಅವರಲ್ಲಿಯ ಪ್ರತಿಯೊಬ್ಬರೂ ಅನುಭವಿಸುವ, ಆಂತರಿಕ ಆವಶ್ಯಕತೆಯಿಂದಾಗಿ, ಸಾಧನೆಯನ್ನು ಪ್ರಾರಂಭಿಸುತ್ತಾನೆ. ಅಭ್ಯಾಸಿಗಳ ತನಕ ತಲುಪುವುದು (ಸಂಪರ್ಕಿಸುವುದು), ಅವರನ್ನು ತಮ್ಮ ಸಾಧನೆಯಲ್ಲಿ ಸ್ಥಿರವಾಗಿರಲು ಸಹಾಯಮಾಡುವುದರಲ್ಲಿ ಒಂದು ಮಹತ್ವದ ಅಂಗವಾಗಿದೆ ಮತ್ತು ಈ ಉದ್ದೇಶವು ಪರಿಣಾಮಕಾರಿಯಾಗಿದೆಯೆಂಬುದು ಈ ಪ್ರಸಂಗದಿಂದ ಮನವರಿಕೆಯಾಯಿತು.

## ವೈಯಕ್ತಿಕ ಚಾರಿತ್ರ್ಯವು ಅಧ್ಯಾತ್ಮಿಕ ಜೀವನದ ತಳಹದಿ

ಬಂಧು ಅಜಯಭಟ್ಟರವರ ಕಲ್ಪನೆಯ ಮೇರೆಗೆ, ಬಾಬೂಜಿ ಮೆಮೋರಿಯಲ್ ಆಶ್ರಮ ನವಪನವೇಲನಲ್ಲಿ, 13 ಮತ್ತು 14 ಡಿಸೆಂಬರ್ 2008 ರಂದು 30 ರಿಂದ 50 ರ ವರೆಗಿನ ವಯಸ್ಸಿನ ಅಭ್ಯಾಸಿಗಳಿಗಾಗಿ ಎರಡು ದಿನಗಳ ವಿಶೇಷ ಪ್ರಶಿಕ್ಷಣ ಕಾರ್ಯಕ್ರಮವನ್ನು ಆಯೋಜಿಸಲಾಯಿತು.

ಅಕ್ಟೋಬರ್ 2008 ರಲ್ಲಿ ಪುಣೆಯಲ್ಲಿ ಜರುಗಿದ ಯುವಕಸಮ್ಮೇಳನದ ಯಶಸ್ಸೇ ಇಂತಹದೊಂದು ಕಾರ್ಯಕ್ರಮ ಹಿರಿಯ ಅಭ್ಯಾಸಿಗಳಿಗಾಗಿಯೂ ಆಚರಿಸಲು ಪ್ರವೃತ್ತಗೊಳಿಸಿತು.

ಈ ಕಾರ್ಯಕ್ರಮವು ಭಾಷಣ, ಚುಟುಕೆಗಳು, ಸ್ಪರ್ಧೆ, ಆಟ ಮತ್ತು 'ಆತನನ್ನೇ ನೋಡಿ', 'ಚಾರಿತ್ರ್ಯವು ಜೀವನವನ್ನು ರಕ್ಷಿಸುತ್ತದೆ', 'ಬಂಧುಭಾವ', 'ಸಹಜಮಾರ್ಗವು ನಿಮ್ಮಲ್ಲಿ ಬಿಂಬಿಸಲಿ', 'ಯೋಗ್ಯತೆಯನ್ನು ಪಡೆಯಲು ಸೇವೆ ಮಾಡಿರಿ' ಇಂತಹ ವಿಷಯಗಳನ್ನು ಕುರಿತ ಪ್ರಸ್ತುತಿ ಮುಂತಾದುವುಗಳಿಂದ ಕೂಡಿತ್ತು. ಸಮೀಪದಲ್ಲಿಯ ಪುಣೆ ಹಾಗು ನಾಸಿಕ ಕೇಂದ್ರದ ಅಭ್ಯಾಸಿಗಳೂ ಸಹ ಇದರಲ್ಲಿ ಕೂಡಿಕೊಂಡರು.

ಒಂದರ ಹಿಂದೊಂದು ಸತತವಾಗಿ ನಡೆದ ಈ ಕಾರ್ಯಕ್ರಮದಲ್ಲಿ ಆತ್ಮನಿರೀಕ್ಷಣೆ ಮತ್ತು ದಿನಚರಿ ಬರೆಯುವುದಕ್ಕಾಗಿ ಸಾಕಷ್ಟು ವೇಳೆ ನಿಗದಿಪಡಿಸಲಾಗಿತ್ತು.

ಬಂಧು ಅಜಯಭಟ್ಟರ್ ಅವರೊಂದಿಗಿನ ಸಮಾಲೋಚನೆಯ ಮೇರೆಗೆ ರೂಪಿಸಿದ ಈ ಎಲ್ಲ ವಿಷಯಗಳು ಒಂದಕ್ಕೊಂದು ಪರಸ್ಪರ ಜೋಡಿಸಲ್ಪಟ್ಟಿದುದರಿಂದ ತಂತಾನೆ ವಿಷಯಗಳಿಗೆ ಚಾಲನೆ ಸಿಗುತ್ತಿತ್ತು. ಹೀಗಾಗಿ ಅಭ್ಯಾಸಿಗಳೆಲ್ಲರು ಇದರಲ್ಲಿ ಮಗ್ನರಾಗಿ ಹೋಗಿದ್ದುದರಿಂದ ಈ ಎರಡು ದಿನಗಳ ಕಾಲ ಬಹಳ ಕಡಿಮೆಯಾಯಿತೆನಿಸಿತು. ಇಂತಹ ಕಾರ್ಯಕ್ರಮಗಳನ್ನು ಮತ್ತೆ ಮತ್ತೆ ಆಯೋಜಿಸಬೇಕೆಂಬ ಸಲಹೆಯೊಂದಿಗೆ ಈ ಕಾರ್ಯಕ್ರಮ ಮುಕ್ತಾಯ ವಾಯಿತು.

## ಕಲ್ಲಿದ್ದಲು ಪಟ್ಟಿ ಪ್ರದೇಶ – ಉತ್ತರ ಆಂಧ್ರಪ್ರದೇಶದಲ್ಲಿ ಒಕ್ಕೂಟ

ಉತ್ತರ ಆಂಧ್ರಪ್ರದೇಶದ, ಸಾಮಾನ್ಯವಾಗಿ ಕಲ್ಲಿದ್ದಲು ಪಟ್ಟಿ ಪ್ರದೇಶವೆಂದು ಉಲ್ಲೇಖಿಸಲ್ಪಟ್ಟ ಪ್ರದೇಶದಲ್ಲಿಯ ಸುಮಾರು 50 ಕಿ. ಮೀ. ಕ್ಷೇತ್ರದಲ್ಲಿ, ನಮ್ಮ ಮಿಶನ್ನಿನ ಅನೇಕ ಕೇಂದ್ರಗಳಿವೆ. ಈ ಕೇಂದ್ರಗಳಲ್ಲಿ, ಅಲ್ಲಿನ ಕಲ್ಲಿದ್ದಲು ಗಣಿಗಳಲ್ಲಿಯ, ಅದರಲ್ಲಿ ಕೆಲವು ಅಭ್ಯಾಸಿಗಳೂ ಸೇರಿದಂತೆ, ಅಧಿಕಾರಿಗಳ ಸಹಾಯದಿಂದ ಬಹಳ ದಿನಗಳ ಹಿಂದೆ ಆಶ್ರಮಗಳನ್ನು ಕಟ್ಟಿಸಲಾಗಿದೆ. ಜೈಪುರವು ಈ ಎಲ್ಲ ಕೇಂದ್ರಗಳಿಗೆ ಮಧ್ಯದಲ್ಲಿದ್ದು, ಇಲ್ಲಿಯ 10.5 ಎಕರೆಯ ಆಶ್ರಮದ ಭೂಮಿಯಲ್ಲಿ, ಸುತ್ತಮುತ್ತಲಿನ ಅಭ್ಯಾಸಿಗಳಿಗಾಗಿ ವಸತಿ(ಕೊಲನಿ)ಯನ್ನು ನಿರ್ಮಿಸುವ ಪ್ರಸ್ತಾವವಿದೆ.

ದಿ.25 ನೇ ಜನವರಿ, ರವಿವಾರರಂದು ಸುತ್ತಮುತ್ತಲಿನ ಕೇಂದ್ರಗಳಿಂದ ಸುಮಾರು 200 ಜನ ಅಭ್ಯಾಸಿಗಳು ಮಂಚರಿಯಾಲನಲ್ಲಿಯ ಪ್ರಶಿಕ್ಷಣ ಸಂಸ್ಥೆಯಲ್ಲಿ ನಡೆದ ಮೊದಲನೆಯ ಸತ್ಸಂಗದಲ್ಲಿ ಉಪಸ್ಥಿತರಿದ್ದರು. ಉತ್ತರ ಆಂಧ್ರಪ್ರದೇಶ ವಿಭಾಗದ ವಿಭಾಗಪ್ರಮುಖರೂ ಸೇರಿದಂತೆ, ಕೆಲವು ಅಭ್ಯಾಸಿಗಳು ಹೈದರಾಬಾದನಿಂದ ಈ ಒಕ್ಕೂಟಕ್ಕೆ ಬಂದಿದ್ದರು. ಮಂಚರಿಯಾಲ ನಂತರ, ಗೊಲೇಟಿ ಎಂಬ ಹೊಸ ಕೇಂದ್ರದಲ್ಲಿ ಒಕ್ಕೂಟವಾಯಿತು. ಈ ಕೇಂದ್ರವು ಕೆಲವೇ ದಿನಗಳ ಅವಧಿಯಲ್ಲಿ ಶೂನ್ಯದಿಂದ ಇಪ್ಪತ್ತಕ್ಕೂ ಮೀರಿ ಅಭ್ಯಾಸಿಗಳವರೆಗೆ ಬೆಳೆದಿದೆ. ಇಲ್ಲಿನ ಗಣಿಗಳ ಅಧಿಕಾರಿಗಳಿಂದ ಉತ್ತೇಜನಪೂರ್ವಕ ಸಹಾಯವಾಗುತ್ತಿದ್ದು ಅವರು ಅಲ್ಲಿನ ಒಂದು ಹಳೆಯ ಕಟ್ಟಡವನ್ನು ನಮ್ಮ ಮಿಶನ್ನಿನ ಮುಂದಿನ ಕಾರ್ಯಕ್ರಮಗಳಿಗಾಗಿ ಸಜ್ಜುಗೊಳಿಸುತ್ತಿದ್ದಾರೆ. ಗೊಲೇಟಿನ ಸತ್ಸಂಗದ ನಂತರ, ಅಭ್ಯಾಸಿಗಳ ತಂಡವೊಂದು ಬೇಲಂಪಲ್ಲಿ ಆಶ್ರಮಕ್ಕೆ ಪ್ರಯಾಣ ಬೆಳೆಸಿತು. ಬೇಲಂಪಲ್ಲಿಯ ಸತ್ಸಂಗದಲ್ಲಿ 80 ಕ್ಕಿಂತಲೂ ಹೆಚ್ಚು ಅಭಾಸಿಗಳು ಉಪಸ್ಥಿತರಿದ್ದರು. ಹೊರವೂರಿನಿಂದ ಪ್ರವಾಸ ಮಾಡಿ ಬಂದವರು, ಗೋದವರಿಖಣಿಯಲ್ಲಿ ರಾತ್ರಿಯನ್ನು ಕಳೆದರು.

ಮರುದಿನ ಡಿಸೆಂಬರ 26 ರ ದಿನ, ಗೋದಾವರಿಖಣಿಯ ಆಶ್ರಮದಲ್ಲಿ ಬೆಳಗಿನ 6.30 ರ ಸತ್ಸಂಗದೊಂದಿಗೆ ಆರಂಭವಾಯಿತು. ತದನಂತರ ಉಪಹಾರ. ಈ ತಂಡ ಗೋದಾವರಿನದಿಯ ಹತ್ತಿರದಲ್ಲಿರುವ ಜಯಪುರ ಆಶ್ರಮದ ಜಾಗಕ್ಕೆ ತೆರಳಿತು. ಅತ್ಯಂತ ನೈಸರ್ಗಿಕ ವಾತಾವರಣದಲ್ಲಿ ಅರಳಿ ಮತ್ತು ಬೇವಿನ ಮರಗಳ ನೆರಳಿನಲ್ಲಿ ಬೆಳಗಿನ ಹತ್ತು ಗಂಟೆಗೆ ಸತ್ಸಂಗ ನೆರವೇರಿತು. ಈ ಸ್ಥಳವು ಸದ್ಗುರುಗಳ ಅಸ್ತಿತ್ವದಿಂದ ದೋಲಾಯಮಾನವಾಗಿತ್ತು.

## ಜಮ್ಮುವಿನಲ್ಲಿ ಶಿಕ್ಷಕರ ಪ್ರಶಿಕ್ಷಣ ಕಾರ್ಯಕ್ರಮ

ದಿ.27 ಡಿಸೆಂಬರ 2008 ರಂದು ಜಮ್ಮುವಿನಲ್ಲಿ, ಸಮಾಜದ ವಿವಿಧ ಭಾಗಗಳಲ್ಲಿ, ಸಹಜಮಾರ್ಗದ ಬಗ್ಗೆ ಮಾತನಾಡಬಲ್ಲ ಶಿಕ್ಷಕರಿಗಾಗಿ ಅವರ ಕಾರ್ಯಕ್ಷಮತೆಯನ್ನು ವಿಕಾಸಗೊಳಿಸುವ ಉದ್ದೇಶದಿಂದ ಮೂರು ದಿನಗಳ ನಿವಾಸೀಯ ಪ್ರಶಿಕ್ಷಣ ಕಾರ್ಯಕ್ರಮವನ್ನು ನೆರವೇರಿಸಲಾಯಿತು. ಜಮ್ಮು–ಕಾಶ್ಮೀರ ಮತ್ತು ಹಿಮಾಚಲಪ್ರದೇಶ ರಾಜ್ಯಗಳಿಂದ ಏಳು ಜನ ಪ್ರಶಿಕ್ಷಕರೊಳಗೊಂಡು, ಒಟ್ಟು 24 ಜನರು ಪಾಲ್ಗೊಂಡಿದ್ದರು. ಪ್ರತಿಯೊಬ್ಬರಿಗೂ ಒಂದುವಾರ ಮುಂಚಿತವಾಗಿಯೇ ತಮ್ಮ ತಯಾರಿಮಾಡಿಕೊಳ್ಳಲು ಅನುಕೂಲವಾಗುವಂತೆ, ವಿಷಯಗಳನ್ನು ಕೊಡಲಾಗಿತ್ತು. ದೆಹಲಿಯಿಂದ ಬಂದ ನಾಲ್ಕುಜನ ಶಿಕ್ಷಕರು ಈ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಅವರು ಕಾರ್ಯಕ್ರಮದಲ್ಲಿ ಪಾಲ್ಗೊಂಡವರೊಂದಿಗೆ, ಅವರ ತಪ್ಪು–ಒಪ್ಪುಗಳ ಬಗ್ಗೆ ಚರ್ಚಿಸಿ, ಸುಧಾರಣೆಯ ಅವಕಾಶದ ಬಗ್ಗೆ ಸೂಚನೆಗಳನ್ನಿತ್ತರು.

ಕಾರ್ಯಕ್ರಮದಲ್ಲಿ ಪಾಲ್ಗೊಂಡವರೆಲ್ಲರೂ ಈ ಪ್ರಶಿಕ್ಷಣ ಕಾರ್ಯಕ್ರಮವು ಸಹಜಮಾರ್ಗವನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಹಾಗು ಅಧ್ಯಾತ್ಮಿಕ ದೃಷ್ಟಿಯಿಂದ ಅತಿಶಯ ಲಾಭಪ್ರದವೂ ಆಗಿದೆಯೆಂಬುದನ್ನು ಮನಗಂಡರು.




ಶ್ರೀ ರಾಮಚಂದ್ರ ಮಿಷನ್
ಎಖೋಸ್ ಇಂಡಿಯ

ಪ್ರಭಾಕೇಂದ್ರಗಳು

ಮಾರ್ಚ್ 2009 ಆಂತರಿಕ ಪ್ರಸಾರಕ್ಕಾಗಿ ಮಾತ್ರ ಸಂಪುಟ 2 ಸಂಚಿಕೆ 2











## ಶಾಹಜಹಾನಪೂರ ಆಶ್ರಮ

ಶಾಹಜಹಾನಪೂರ ಆಶ್ರಮದ ಕಟ್ಟಡವು ಬಾಬೂಜೀಯವರು ತಮ್ಮ ಸದ್ಗುರು ಫತೆಹಗಡದ ಶ್ರೀ ಲಾಲಾಜೀ ಮಹಾರಾಜರಿಗೆ ಪ್ರೀತಿಯಿಂದ ಅರ್ಪಿಸಿದ ಕಾಣಿಕೆಗಳಲ್ಲೊಂದಾಗಿದೆ. ಬಾಬೂಜೀಯವರು ಈ ಆಶ್ರಮವನ್ನು ಕಟ್ಟಿಸಲು ಯೋಗ್ಯವಾದ ಭೂಮಿಯನ್ನು ಹುಡುಕುವ ಕಾರ್ಯದಿಂದ ಮೊದಲುಗೊಂಡು ಎಲ್ಲ ಕೆಲಸಗಳಲ್ಲಿ ತತ್ಪರತೆಯನ್ನು ವಹಿಸಿಕೊಂಡಿದ್ದರು. ಈ ಆಶ್ರಮದಲ್ಲಿ ಒಂದು ಅಮೃತಶಿಲೆಯನ್ನು ನೆಡಿಸಿ ಅದರ ಮೇಲೆ "ಶಾಹಜಹಾನಪೂರ– ಸಹಜಮಾರ್ಗ ಪದ್ಧತಿಯ ಜನ್ಮ ಸ್ಥಳ" ಎಂದು ಕೊರೆಯಲು ತಾವು ಸ್ವತಃ ಅಪ್ಪಣೆ ಕೊಡಿಸಿದ್ದರು. ಈ ಆಶ್ರಮವು ಶಾಹಜಹಾನಪೂರ ರೇಲ್ವೆ ನಿಲ್ದಾಣದಿಂದ ಸುಮಾರು 8ಕಿ.ಮೀ. ಹಾಗೂ ಬಸ್ ನಿಲ್ದಾಣದಿಂದ 7ಕಿ.ಮೀ. ಅಂತರದಲ್ಲಿದೆ. ಶಾಹಜಹಾನಪೂರದ ಆಶ್ರಮವು 15 ಎಕರೆ ಭೂಮಿಯಲ್ಲಿ ವಿಸ್ತರಿಸಿಕೊಂಡಿದ್ದು ಶಾಹಜಹಾನಪೂರ – ಹರದೋಯಿ ಮಾರ್ಗ ಹಾಗು ರಾಷ್ಟ್ರೀಯ ಹೆದ್ದಾರಿ ಕ್ರ. 24, ಕೂಡುವ (ಜಂಕ್ಶನ್) ಸ್ಥಾನದಲ್ಲಿದೆ. ಆಶ್ರಮದ ಧ್ಯಾನಕಕ್ಷವು ಬಾಬೂಜಿಯವರ ಮಾರ್ಗದರ್ಶನದಲ್ಲಿ 1973 ರಿಂದ 76 ರ ಅವಧಿಯಲ್ಲಿ ಕಟ್ಟಲಾಯಿತು. ಈ ಧ್ಯಾನಮಂದಿರವನ್ನು ದಿ. 5ನೇ ಫೆಬ್ರುವರಿ 1976 ರ ಬಸಂತಪಂಚಮಿಯ ಉತ್ಸವದಲ್ಲಿ ಬಾಬೂಜೀಯವರು ತಮ್ಮ ಸದ್ಗುರು ಲಾಲಾಜೀಯವರಿಗೆ ಸಮರ್ಪಿಸಿದರು.

ಧ್ಯಾನಮಂದಿರವು 800 ಅಭ್ಯಾಸಿಗಳು ಕೂಡುವಷ್ಟು ಕ್ಷಮತೆ ಹೊಂದಿದೆ. ಇದರಲ್ಲಿ ಮೂರು ಆಚ್ಛಾದಿತ ಜಗುಲಿಗಳು ಹಾಗು ಪೂರ್ವದಿಶೆಯಲ್ಲೊಂದು ವ್ಯಾಸಪೀಠವು ಇದೆ. ವ್ಯಾಸಪೀಠದ ಹಿಂದಿನ ಗೋಡೆಯಮೇಲೆ, ಕೆನಡಾದ ಅಭ್ಯಾಸಿಯೊಬ್ಬರು ಕೊಟ್ಟ ಬಣ್ಣದ ಗಾಜಿನಲ್ಲಿ ಕೊರೆದ ಮಿಶನ್ನಿನ ಬೋಧಚಿಹ್ನೆಯನ್ನಿರಿಸಲಾಗಿದೆ. ಈ ಬೋಧಚಿಹ್ನೆಯು ಪೂರ್ವದಿಶೆಯಲ್ಲಿದುದರಿಂದ ಸೂರ್ಯ ಮೇಲೇರಿದಂತೆ ಇದರ ಬಣ್ಣ ಬದಲಾಗುತ್ತಿರುತ್ತದೆ. ಆಕರ್ಷಕವಾದ ಹಸಿರು ಅಮೃತಶಿಲೆಯ ಹಾಸಿಗೆಕಲ್ಲುಗಳು ಅಹಮದಾಬಾದ ಹತ್ತಿರದ 'ಅಂಬಾಜಿ ಹಿಲ್ಸ್'ಎಂಬ ಸ್ಥಳದಿಂದ ತರಲಾಗಿದೆ.ಈ ಧ್ಯಾನಕಕ್ಷವು ನೈಸರ್ಗಿಕವಾಗಿ ವಾತಾನುಕೂಲಿತವಾಗುವಂತೆ, ಅಂದರೆ ಚಳಿಗಾಲದಲ್ಲಿ ಕಾವಾಗಿರುವಂತೆಯೂ ಮತ್ತು ಬೇಸಿಗೆಯಲ್ಲಿ ತಂಪಾಗಿರುವಂತೆಯೂ ನಿರ್ಮಿಸಲಾಗಿದೆ. ಈ ಕಕ್ಷದ ಹೊರಭಾಗದಲ್ಲಿ ಸುತ್ತಲೂ ಕೆಂಪುಬಣ್ಣದ ಆಗ್ರಾ ಕಲ್ಲಿನ ಹಾಸಿಗೆಯ ಪ್ಲಾಟ್ ಫಾರ್ಮ ಇದೆ ಹಾಗೂ ಹೊರಗಿನ ಗೋಡೆಗಳಿಗೆ ಬಿಳೀ ಆಗ್ರಾ ಕಲ್ಲುಗಳನ್ನು ಅಂಟಿಸಲಾಗಿದೆ.

ಸಾಮಾನ್ಯವಾದ, ಎರಡಂತಸ್ತಿನ ಕಟ್ಟಡದ ಕೆಳಭಾಗದಲ್ಲಿ ಬಂಧುಗಳಿಗೊಂದು ಹಾಗು ಭಗಿನಿಯರಿಗೊಂದರಂತೆ ಎರಡು ಶಯನಕಕ್ಷ(ಡಾರ್ಮಿಟರಿ) ಹಾಗೂ ಮೇಲ್ಗಡೆಯಲ್ಲಿ 14 ಕೋಣೆಗಳಿವೆ. ಇವುಗಳಲ್ಲಿ ಒಂದು ಕೋಣೆ ಬಾಬೂಜೀಯವರು ತಮ್ಮ ತಂದೆ ಶ್ರೀ ಬದ್ರೀಪ್ರಸಾದರವರ ನೆನಪಿನಲ್ಲಿ ಹಾಗೂ ಇನ್ನೊಂದನ್ನು ಚಾರೀಜೀಯವರು ತಮ್ಮ ತಾಯಿ ಜಾನಕಿಯವರ ನೆನಪಿನಲ್ಲಿ ಕೊಟ್ಟಿದ್ದಾರೆ.

ಈ ಆಶ್ರಮವು ಬಾಬೂಜೀಮಹಾರಾಜರ ಸಮಾಧಿಸ್ಥಳ, ವಿಸ್ತಾರವಾದ ಅಡುಗೆಮನೆ ಮತ್ತು ಊಟದಕಕ್ಷವನ್ನೊಳಗೊಂಡಿದೆ. ಬಾಬೂಜೀಯವರ ಕುಟೀರ ಮತ್ತು ಗುರುಗಳ ಕುಟೀರಗಳು ಧ್ಯಾನಕಕ್ಷದ ಇಬ್ಬದಿಗೂ ಇವೆ.

ಪಶ್ಚಿಮದಕಡೆಗಿರುವ ಎರಡೂ ಮುಖ್ಯದ್ವಾರಗಳ ಮಧ್ಯಭಾಗದಲ್ಲಿ, ಕೆಂಪುಕಲ್ಲಿನಲ್ಲಿ ಮಾಡಿದ ಮತ್ತು ತಾಮ್ರಪತ್ರಗಳಿಂದ ಸುತ್ತಲೂ ಆಚ್ಛಾದಿತವಾದ ಮಿಶನ್ನಿನ ಬೋಧಚಿಹ್ನೆಯನ್ನೊಳಗೊಂಡ ತ್ರಿಕೋನಾಕಾರದ ಖಂಬೆಯು, ಅದರ ಸುತ್ತ ಬಣ್ಣ ಬಣ್ಣದ ನೀರಿನಧಾರೆ ಸುರಿಸುವ ಉತ್ತಮವಾದ ಕಾರಂಜಿಯನ್ನೊಳಗೊಂಡಿದೆ. ಕಾರಂಜಿಯ ನಾಲ್ಕೂಕಡೆಗೂ ಇರುವ ನಾಲ್ಕು ಕಮಾನುಗಳು ಇದರ ಶಿಲಾನ್ಯಾಸದ ಸೊಬಗನ್ನು ಹೆಚ್ಚಿಸುತ್ತದೆ.





**To subscribe to this Newsletter please visit**
**http://www.srcm.org/centers/as/in/newsletter/index.jsp**
**For feedback, suggestions and news articles please send email to**
**in.newsletter@srcm.org**

© 2009 Shri Ram Chandra Mission ("SRCM"). All rights reserved.
"Shri Ram Chandra Mission", "Sahaj Marg", "SRCM", "Constant Remembrance" and the Mission's Emblem are registered Trademarks of Shri Ram Chandra Mission.
This Newsletter is intended exclusively for the members of SRCM.